ಶ್ರೀ ವಾಟಾಳ್ ನಾಗರಾಜ್:- ಯಾವ ಸರ್ಕಾರ ಬಂದರೂ ಈ ಪದ್ಧತಿ ಖಂಡಿತ ಇರಬಾರದು. ಅದು ಅಕ್ಷಮ್ಯ ಅಪರಾಧ. ಈ ಪದ್ಧತಿ ಖಂಡಿತಾ ತಪ್ಪಲೇಬೇಕು.

MR.SPEAKER:- Please come to Cogentrix.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನಾಮಕರಣ ಪದ್ಧತಿ ರದ್ದಾಗಬೇಕು. ಅದು ಯಾವ ಸರ್ಕಾರವಾದರೂ ಅಧಿಕಾರದಲ್ಲಿರಲಿ, ಯಾರಾದರೂ ಅಧಿಕಾರದಲ್ಲಿರಲಿ. ನಾಮಕರಣ ಪದ್ಧತಿ ಮಾತ್ರ ದಯವಿಟ್ಟು ಬೇಡ, ಅದನ್ನು ರದ್ದು ಮಾಡಿ.

3. ಕೊಜೆಂಟ್ರಿಕ್ಸ್ ಪವರ್ ಪ್ರಾಜೆಕ್ಟ್ ಬಗ್ಗೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ತಮ್ಮ ಅನುಮತಿ ಪಡೆದುಕೊಂಡು ಇಲ್ಲಿ ಮಾತನಾಡಲು ನಿಂತಿದ್ದೇನೆ. ಈ ಕೊಜೆಂಟ್ರಿಕ್ಸ್ ಪವರ್ ಪ್ರಾಜೆಕ್ಟ್ ಬಗ್ಗೆ ಒಂದು ವಾದ ವಿವಾದ ಇವತ್ತು ಪ್ರಾರಂಭವಾಗಿದೆ. ಸುಮಾರು ಒಂದು ಸಾವಿರ ಮೆಗಾವ್ಯಾಟ್ ಪ್ರಾಜೆಕ್ಟ್ ಅನ್ನು ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳ ಖರ್ಚಿನಿಂದ ಮಂಗಳೂರು ಜಿಲ್ಲೆಯಲ್ಲಿ ಬರತಕ್ಕಂಥ ಒಂದು ಪ್ರಾಜೆಕ್ಟ್. ಕರ್ನಾಟಕ ರಾಜ್ಯದಲ್ಲಿ ಏನು ವಿದ್ಯುತ್ ಕೊರತೆ ಇದೆ, ಇದನ್ನು ನೀಗಿಸಬೇಕು ಎನ್ನತಕ್ಕಂಥ ದೃಷ್ಟಿಯಿಂದ, ಪ್ರೈವೇಟ್ ಕಂಪನಿಗಳನ್ನೂ ಕೂಡ ಈ ವಿದ್ಯುತ್ ಉತ್ಪಾದನೆಯಲ್ಲಿ ಭಾಗಿಗಳಾಗಿ ಮಾಡಬೇಕು ಎಂದು ಹೇಳಿ ಅನೇಕ ಫಾರಿನ್ ಕಂಪನೀಸ್ ಕೂಡ ಮತ್ತು ಸ್ಥಳೀಯ ಕಂಪನಿಗಳೂ ಕೂಡ ಮತ್ತು ರಾಜ್ಯದಲ್ಲಿರತಕ್ಕ ಅನೇಕ ಕಂಪನಿಗಳು ಕೂಡ ಇವತ್ತು ವಿದ್ಯುತ್ ಉತ್ಪಾದನೆಗಾಗಿ ಮುಂದು ಬಂದಿವೆ. ಅದರಲ್ಲಿ ಇವತ್ತು ಒಂದು ಹಂತದಲ್ಲಿ ಅಂದರೆ ಕ್ಲಿಯರ್ ಆಗತಕ್ಕಂಥ ಹಂತದಲ್ಲಿ ಇರತಕ್ಕಂಥದ್ದು, ಅಥವಾ ಪ್ರಾರಂಭ ಆಗತಕ್ಕ ಹಂತದಲ್ಲಿ ಇರತಕ್ಕ ಕೊಜೆಂಟ್ರಿಕ್ಸ್ ಪ್ರಾಜೆಕ್ಟ್ ಬಗ್ಗೆ ಇವತ್ತು ಒಂದು ದೊಡ್ಡ ವಾದ ಪ್ರಾರಂಭವಾಗಿದೆ.

11.20 ಎ.ಎಂ.

ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಒಂದು ಹೇಳಿಕೆ ಕೊಟ್ಟಿದ್ದಾರೆ, ಕೊಜೆಂಟ್ರಿಕ್ಸ್ ಪ್ರಾಜೆಕ್ಟ್ ಕ್ಲೀಯರ್ ಆಗಿ ಇದೆ, ಮತ್ತು ಈಗ ಬಹು ಬೇಗ ಅದನ್ನು ಪ್ರಾರಂಭ ಮಾಡುತ್ತೇವೆ ಎನ್ನತಕ್ಕಂಥದ್ದನ್ನೂ ಕೂಡ ಅವರು ಹೇಳಿದ್ದಾರೆ. ಆದರೆ ಈ ದೇಶದ ಪ್ರಧಾನ ಮಂತ್ರಿಗಳು ಹೇಳಿದ್ದಾರೆ, ಕೊಜೆಂಟ್ರಿಕ್ಸ್ ಪ್ರಾಜೆಕ್ಟ್ ಇನ್ನೂ ಕ್ಲಿಯರ್ ಆಗಿಲ್ಲ, ಅದಕ್ಕೆ ಕೆ.ಇ.ಬಿ.ಯಿಂದ ಯಾವ ಒಂದು ಅಗ್ರಿಮೆಂಟ್ ಆಗಬೇಕು, ಆ ಅಗ್ರಿಮೆಂಟ್ ಪವರ್ ಪರ್ಚೇಸ್ ಅಗ್ರೀಮೆಂಟ್ ಆಗಿಲ್ಲ. ಅದಕ್ಕಾಗಿ ಆ ಪ್ರಾಜೆಕ್ಟ್‌ಗೆ ಇನ್ನು ಕ್ಲಿಯರೆನ್ಸ್ ನಾವು ಕೊಟ್ಟಿಲ್ಲ, ಅದಕ್ಕಾಗಿ ಅದರ ಬಗ್ಗೆ ನಾವು ಕ್ಲಿಯರೆನ್ಸ್ ಕೊಡದೆ ಇದ್ದಾಗ ಇವತ್ತು ಕ್ಲಿಯರೆನ್ಸ್ ಕೊಟ್ಟಿದ್ದೇವೆಂದು ಅಪಾದನೆ ಮಾಡತಕ್ಕಂಥದ್ದು ಅಷ್ಟೊಂದು ಸರಿಯಲ್ಲ ಎನ್ನತಕ್ಕಂತಹ ಮಾತನ್ನು ಪ್ರಧಾನ ಮಂತ್ರಿಗಳು ಹೇಳುತ್ತಿದ್ದಾರೆ. ಏತನ್ಮಧ್ಯೆ ಅವರದೇ ಪಕ್ಷದ ಒಬ್ಬರು ಎಂ.ಪಿ.ಗಳಾದ ಶ್ರೀಮತಿ ಮೇನಕಾ ಗಾಂಧಿಯವರು ಏನು

ಹೇಳುತ್ತಿದ್ದಾರೆ ಎಂದರೆ, ಈ ಕೊಜೆಂಟ್ರಿಕ್ಸ್ ಪ್ರಾಜೆಕ್ಟ್‌ನಲ್ಲಿ ಸುಮಾರು 100 ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ, ಅಂತಹ ಒಂದು ಅಂಡರ್ ಹ್ಯಾಂಡ್ ಡೀಲಿಂಗ್ ಆದಂತಹ ಪ್ರಾಜೆಕ್ಟ್‌ನ್ನು ಪ್ರಧಾನಮಂತ್ರಿಗಳು ಕ್ಲಿಯರ್ ಮಾಡಿದ್ದಾರೆ ಎಂದು ಆಪಾದನೆ ಮಾಡಿ ಅವರು ಇವತ್ತಿನ ದಿವಸ ಪಕ್ಷದಿಂದ ಹೊರಗಡೆ ಹೋಗುವುದಕ್ಕೆ ಅವಕಾಶ ಆಯಿತು. ನಮ್ಮ ಕರ್ನಾಟಕ ರಾಜ್ಯದ ಜನತೆಗೆ ಮತ್ತು ಈ ಸದನಕ್ಕೆ ತಿಳಿಯಬೇಕಾಗುತ್ತದೆ, ಗೊತ್ತಾಗಬೇಕಾಗುತ್ತದೆ, ಕೊಜೆಂಟ್ರಿಕ್ಸ್ ಪ್ರಾಜೆಕ್ಟ್ ಯಾವ ಹಂತದಲ್ಲಿ ಇದೆ ಸುಮಾರು ಒಂದು ಸಾವಿರ ಮೆ.ವ್ಯಾ. ಸುಮಾರು 4500 ಕೋಟಿ ರೂಪಾಯಿ ಖರ್ಚು ಮಾಡಿ ಪವರ್ ಜನರೇಟ್ ಮಾಡತಕ್ಕಂತಹ ಪ್ರಾಜೆಕ್ಟ್ ಸ್ಥಿತಿ ಏನು ಇದೆ, ಯಾವ ಹಂತದಲ್ಲಿ ಇದೆ. ಒಂದು ಕಡೆ ಪ್ರಧಾನಮಂತ್ರಿಗಳು ಆ ಹೇಳಿಕೆ ಕೊಡುತ್ತಾರೆ, ಇನ್ನೊಂದು ಕಡೆ ಮುಖ್ಯ ಮಂತ್ರಿಗಳು ಇಲ್ಲ ಅದು ಕ್ಲಿಯರ್ ಆಗಿದೆ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಫಾರ್ಮರ್ ಎನ್‌ವೈರನ್‌ಮೆಂಟ್ ಮಿನಿಸ್ಟರ್ ಮತ್ತು ಜನತಾದಳದ ಎಮ್.ಪಿ.ಗಳು ಶ್ರೀಮತಿ ಮೇನಕಾ ಗಾಂಧಿಯವರು ಹೇಳುತ್ತಾರೆ, ಇದರಲ್ಲಿ ಲಾಟ್ ಆಫ್ ಕರಪ್‌ಷನ್ ನಡೆದು ಇವತ್ತು ಆ ಪ್ರಾಜೆಕ್ಟ್‌ನ್ನು ಕ್ಲಿಯರ್ ಮಾಡಿದ್ದಾರೆ ಎನ್ನತಕ್ಕಂತಹ ಆಪಾದನೆ ನೇರವಾಗಿ ಅವರ ಪಕ್ಷದವರೇ ಮಾಡಿದ್ದಾರೆ. ಅದಕ್ಕೆ ಹೆದರಿಕೊಂಡು ಇವತ್ತಿನ ದಿವಸ ಏನಾದರೂ ಇದು ನಿಂತಿದೆಯೇ ಹೇಗೆ ಅಥವಾ ಯಾವ ಒಂದು ಪವರ್ ಪರ್ಚೇಸ್ ಅಗ್ರಿಮೆಂಟ್ ಎನ್ನತಕ್ಕಂಥದ್ದು ಇದು ಏನು ಕೆ.ಇ.ಬಿ. ಜೊತೆಯಲ್ಲಿ ಆಗಿದೆಯೇ ಹೇಗೆ, ಆದರೆ ಎಷ್ಟು ರೂಪಾಯಿಗೆ ತಾವು ಒಪ್ಪಂದವನ್ನು ಕೊಟ್ಟಿದ್ದೀರಿ, ಎಷ್ಟು ರೂಪಾಯಿಗೆ ಇದನ್ನು ಪರ್ಚೇಸ್ ಮಾಡಬೇಕು, ಕನ್‌ಸ್ಯೂಮರ್‌ಗೆ ಎಷ್ಟು ರೂಪಾಯಿಯಲ್ಲಿ ಕೊಡಬೇಕು ಅದು ಏನಾದರೂ ದರ ಫಿಕ್ಸ್ ಮಾಡಿದ್ದೀರೋ? ಅವರ ಜೊತೆಯಲ್ಲಿ ಚರ್ಚೆ ಆಗಿದೆಯೇ? ಆದರೆ ಅದು ಯಾವಾಗ ಅಗ್ರಿಮೆಂಟ್ ಆಗಿದೆ ಎನ್ನತಕ್ಕಂಥದ್ದು ಒಂದು. ಇನ್ನೊಂದು ಮಾತು ಏನೆಂದರೆ, ಎನ್‌ವೈರನ್‌ಮೆಂಟ್ ಕ್ಲೀಯರೆನ್ಸ್ ಸಿಕ್ಕಿದೆ ಮತ್ತು ಉಳಿದ ಕೆಲವು ಡಿಪಾರ್ಟ್‌ಮೆಂಟ್‌ನಲ್ಲಿ ಪವರ್ ಡಿಪಾರ್ಟ್‌ಮೆಂಟ್ ಏನು ಇದೆ ಅದರಿಂದ ಇವತ್ತು ಕ್ಲಿಯರೆನ್ಸ್ ಸಿಕ್ಕಿದೆ, ಆದರೆ ಇನ್ನು ಸರ್ಕಾರದಿಂದ ಕ್ಯಾಬಿನೆಟ್‌ನಿಂದ ಇದಕ್ಕೆ ಕ್ಲಿಯರೆನ್ಸ್ ಸಿಕ್ಕಿಲ್ಲ ಎನ್ನತಕ್ಕಂತಹ ವಾದವನ್ನು ಒಂದು ಕಡೆ ಹೇಳುತ್ತಿದ್ದಾರೆ. ಏತನ್ಮಧ್ಯೆ ಇದು ಪವರ್ ಪ್ರಾಜೆಕ್ಟ್ ಕ್ಲಿಯರ್ ಆಗಿದೆ ಎಂದು ಪಾರ್ಲಿಮೆಂಟ್‌ನಲ್ಲಿ ಶ್ರೀಮಾನ್ ಜಾರ್ಜ್ ಫರ್ನಾಂಡಿಸ್‌ರವರು ಒಂದು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದಾರೆ, ಪ್ರಧಾನ ಮಂತ್ರಿಯವರ ವಿರುದ್ಧ. ಇದರಿಂದ ಈ ಕರ್ನಾಟಕ ರಾಜ್ಯದ ಜನತೆಗೆ ಇವತ್ತು ಬಹಳ ಕನ್‌ಫ್ಯೂಷನ್ ಅಂದರೆ ಈ ಪ್ರಾಜೆಕ್ಟ್‌ನ ಹಂತ ಏನು ಇದೆ, ಏನು ಈ ಪ್ರಾಜೆಕ್ಟ್ ಇವತ್ತು ಅಸ್ಥಿತ್ವದಲ್ಲಿ ಬರುತ್ತದೆ. ಹೇಗೆ, ಅಥವಾ ಈ ಪ್ರಾಜೆಕ್ಟ್ ನಿಲ್ಲುತ್ತದೊ ಹೇಗೆ ಅಥವಾ ಬಂದಂತಹ ಜನರಿಗೆ ಸರ್ಕಾರದ ಸಹಕಾರ ಇದೆಯೋ ಇಲ್ಲವೋ ಅಥವಾ ಅದರಲ್ಲಿ ಏನಾದರೂ ನಿಮ್ಮ ಎಂ.ಪಿ.ಗಳು ಮಾಡಿದ ಹಾಗೆ ಅಂಡರ್ ಹ್ಯಾಂಡ್ ಡೀಲಿಂಗ್ ಆಗಿ ಅದನ್ನು ನಿಲ್ಲಿಸಬೇಕೆಂದು ಏನಾದರೂ ಇದೆಯೇ? ಅಥವಾ ಇದಕ್ಕೆ ಪ್ರೋತ್ಸಾಹ ಕೊಡಬೇಕೆಂದು ಇದೆಯೋ ಎನ್ನತಕ್ಕಂಥದ್ದು ಕೂಡ ತಾವು ಸ್ಪಷ್ಟಪಡಿಸಿದರೆ, ಜನರಿಗೆ

ಒಂದು ಮೆಸೇಜ್ ಹೋಗುತ್ತದೆ, ಮುಂದೆ ಯಾರೂ ಇಂತಹ ಪ್ರಾಜೆಕ್ಟ್‌ನ್ನು ಹಾಕಬೇಕೆಂದು ಹೇಳಿ ಕರ್ನಾಟಕ ರಾಜ್ಯಕ್ಕೆ ಬಂದರೆ ಅವರಿಗೂ ಕೂಡ ಇವತ್ತಿನ ದಿವಸ ಗೊತ್ತಾಗುತ್ತದೆ. ಇಲ್ಲಾ, ಕರ್ನಾಟಕ ರಾಜ್ಯ ಸರ್ಕಾರ ಯಾವ ಒಂದು ನಿಲುವನ್ನು ಮೊದಲು ತೆಗೆದುಕೊಂಡಿದ್ದರು, ಆ ನಿಲುವು ಇವತ್ತು ಕೂಡ ಖಂಡಿತವಾಗಿ ಜಾರಿಯಲ್ಲಿದೆ ಎಂದು. ಅದಕ್ಕೆ ಯಾವುದೇ ಪವರ್ ಪ್ರಾಜೆಕ್ಟ್‌ಗಳಿಗೆ ಅದು ಪ್ರೈವೇಟ್ ಪವರ್ ಪ್ರಾಜೆಕ್ಟ್ ಇರಬಹುದು, ರಾಜ್ಯ ಸರ್ಕಾರ ಆ ಹಿಂದಿನ ಪ್ರೋಗ್ರಾಂ ಮತ್ತು ಪಾಲಿಸಿ ಪ್ರಕಾರ ಸಹಾಯ ಮಾಡುತ್ತದೆ ಎನ್ನತಕ್ಕಂಥದ್ದು ಒಂದು ಮೆಸೇಜ್ ಹೋಗುತ್ತದೆ. ಇಲ್ಲವೆಂದರೆ ನಾವು ಕನ್‌ಫ್ಯೂಷನ್‌ನಲ್ಲಿ ಇದ್ದರೆ ಒಬ್ಬರು ಬೇಡ ಎನ್ನುವುದು, ಒಬ್ಬರು ಬೇಕು ಎನ್ನುವುದು ಒಬ್ಬರು ಕ್ಲಿಯರ್ ಆಗಿದೆ ಎಂದು ಹೇಳುವುದು, ಇನ್ನೊಬ್ಬರು ಕ್ಲಿಯರ್ ಆಗಿಲ್ಲ ಎಂದು ಹೇಳುವುದು, ಹಾಗಾಗಿ ಈ ಕನ್‌ಫ್ಯೂಷನ್ ಕ್ರಿಯೇಟ್ ಮಾಡಿ ನಮಗೆ ಬೇಕಾದ ಪ್ರಾಜೆಕ್ಟ್‌ಗಳು ಇವತ್ತು ಇಲ್ಲಿಂದ ಹೋಗತಕ್ಕಂತಹ ಸಾಧ್ಯತೆ ಇದೆ. ಇದರ ಬಗ್ಗೆ ತಾವು ಸ್ಪಷ್ಟವಾದಂಥ ಹೇಳಿಕೆ ಕೊಡಬೇಕು, ಯಾವ ಸ್ಟೇಜ್‌ನಲ್ಲಿ ಇದೆ, ಎಲ್ಲಿ ಇದೆ, ಎನ್ನತಕ್ಕಂಥದ್ದು ಮತ್ತು ಶ್ರೀಮತಿ ಮೇನಕಾ ಗಾಂಧಿಯವರು ಒಂದು ಛಾರ್ಜ್ ಮಾಡಿದ್ದಾರೆ ಅದಕ್ಕೂ ಸರಿಯಾದ ಉತ್ತರ ತಮ್ಮಿಂದ ಬೇಕಾಗುತ್ತದೆ. ಏಕೆಂದರೆ ಕೊಜೆಂಟ್ರಿಕ್ಸ್ ಪ್ರಾಜೆಕ್ಟ್ ಎಲ್ಲವೂ ನಿಮ್ಮ ಕಾಲದಲ್ಲಿ ಕೂಡ ಕಂಪ್ಲೀಟ್ ಆದುದು ಅಲ್ಲ. ಸುಮಾರು ನಾಲ್ಕೈದು ಆರು ವರ್ಷಗಳಿಂದ ಪ್ರೋಸೆಸ್ ಆಗಿ ಆಗಿ ಈ ಹಂತಕ್ಕೆ ಬಂದಿದೆ, ಅಂದರೆ ಏನಾಗುತ್ತದೆ ಎಂದರೆ ಇವತ್ತು 100 ಕೋಟಿ ರೂಪಾಯಿಯಲ್ಲಿ ಅವ್ಯವಹಾರ ಆಗಿದೆ ಎಂದು ಆಪಾದನೆ ಅವರು ಮಾಡಿದ ಮೇಲೆ ಇದಕ್ಕೆ ಪ್ರಾರಂಭದಿಂದ ಇಲ್ಲಿಯವರೆಗೆ ಎಲ್ಲರೂ ಕೂಡ ಇದ್ದಾರೆ ಎನ್ನತಕ್ಕಂತಹ ಭಾವನೆ ಬರುತ್ತದೆ. ಇದ್ದರೆ ಯಾರ್ಯಾರು ಇದ್ದಾರೆ, ಯಾವ ದೃಷ್ಟಿಯಿಂದ ಅವರು ಈ ಅಲಿಗೇಷನ್ ಮಾಡಿದರು ಎನ್ನತಕ್ಕಂಥದ್ದನ್ನು ತಾವು ಸ್ಪಷ್ಟಪಡಿಸಬೇಕು. ಮತ್ತು ಜನರ ಮನಸ್ಸಿನಲ್ಲಿ ಒಂದು ಸಂಶಯ ಏನು ಮೂಡಿದೆ ಇಂತಹ ಪ್ರಾಜೆಕ್ಟ್‌ಗಳಿಗೆ ಈ ಸರ್ಕಾರ ಏಕೆ ಮಾನ್ಯತೆ ಕೊಡುತ್ತಿಲ್ಲ, ಅಥವಾ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಕೇಂದ್ರ ಸರ್ಕಾರದಲ್ಲೂ ಕೂಡ ಇದಕ್ಕೆ ತಡೆ ಹಿಡಿಯತಕ್ಕಂತಹ ಪ್ರಯತ್ನ ನಡೆದಿದೆ ಕೆಲವು ಜನ ಎನ್‌ವೈರನ್‌ಮೆಂಟ್ ಎಂದು ತಡೆ ಹಿಡಿಯುತ್ತಾರೆ, ಕೆಲವು ಜನ ರಾಜಕೀಯ ದುರುದ್ದೇಶದಿಂದ ಇದನ್ನು ನಿಲ್ಲಿಸಬೇಕೆಂದು ಇರಬಹುದು, ಕೆಲವು ಜನರಿಗೆ ತಾವೇ ಒಂದು ಪ್ರಾಜೆಕ್ಟ್‌ನ್ನು ಬೇರೆ ಬೇರೆ ರೀತಿಯಿಂದ ಹಾಕಿಕೊಳ್ಳಬೇಕೆಂದು ಇರತಕ್ಕಂತಹ ಪ್ರಾಜೆಕ್ಟ್‌ಗಳನ್ನು ನಿಲ್ಲಿಸಬೇಕೆಂದು ಪ್ರಯತ್ನ ಮಾಡುತ್ತಿರಬಹುದು. ಅದಕ್ಕೋಸ್ಕರ ಇದರ ಬಗ್ಗೆ ಅವರು ಸ್ಪಷ್ಟವಾಗಿ ಹೇಳಿಕೆ ಕೊಡಬೇಕೆಂದು ನಾನು ಕೇಳುತ್ತೇನೆ. ಮತ್ತು ಇಲ್ಲಿಯವರೆಗೆ ಯಾವ ಯಾವ ಹಂತದಲ್ಲಿ ತಾವು ಅದನ್ನು ಅಪ್ರೂವ್ ಮಾಡಿ ಕಳುಹಿಸಿದ್ದೀರಿ ಎನ್ನತಕ್ಕಂಥದ್ದು ಕೂಡ ಈ ಸದನಕ್ಕೆ ಕಳಿಸಬೇಕು ಎಂದು ತಮ್ಮ ಮುಖಾಂತರ ಅವರಿಗೆ ಕೇಳುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ:- ಪವರ್ ಪರ್ಚೇಸ್ ಅಗ್ರಿಮೆಂಟ್ ಏನು ಮಾಡಿದ್ದಾರೆ, ಅದರ ಕಾಪಿ ಸದನದ ಸದಸ್ಯರಿಗೆ ಕೊಟ್ಟರೆ ಬಹುಶಃ ಹೆಚ್ಚಿನ ಮಾಹಿತಿ ಸಿಕ್ಕ ಹಾಗೆ

ಆಗುತ್ತದೆ. ಏಕೆಂದರೆ ನಾವು ಕೇಳಿದರೂ ಅದು ಸಿಕ್ಕಿಲ್ಲ. ಪವರ್ ಪರ್ಚೇಸ್ ಅಗ್ರಿಮೆಂಟ್ ಕಾಪಿಗಳನ್ನು ನಮಗೆಲ್ಲರಿಗೂ ಕೊಡಬೇಕು.

+ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಅಧ್ಯಕ್ಷರೆ, ಮಾನ್ಯ ಖರ್ಗೆಯವರು ಬಹಳ ಮುಖ್ಯವಾದ ಕೊಜೆಂಟ್ರಿಕ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಸಾಕಷ್ಟು ಗೊಂದಲ ಇತ್ತೀಚೆಗೆ ಪ್ರಾರಂಭವಾಗಿದೆ. ಆದ್ದರಿಂದ ಸ್ಪಷ್ಟವಾಗಿ ಸರ್ಕಾರದ ನಿಲುವು ಏನು ಎನ್ನತಕ್ಕಂಥದ್ದನ್ನು ಹೇಳಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ ಎರಡನೆಯದು, ಪವರ್ ಪರ್ಚೇಸ್ ಅಗ್ರಿಮೆಂಟ್ ಆಗಿದೆ ಪ್ರಾಜೆಕ್ಟ್ ಕ್ಲಿಯರೆನ್ಸ್ ಇಲ್ಲ ಎಂದು ಹೇಳುತ್ತಿದ್ದಾರೆ, ಪ್ರಾಜೆಕ್ಟ್ ಕ್ಲಿಯರೆನ್ಸ್ ಇಲ್ಲ ಎಂದು ಹೇಳತಕ್ಕಂತಹವರು ಇಲ್ಲಿ ಅದಕ್ಕೆ ಬೇಕಾದ ಎಲ್ಲಾ ತಯಾರಿ ನಡೆಯುತ್ತಿದೆ ಎಲ್ಲಾ ಮುಗಿದಿದೆ ಎಂದು ಕೊಜೆಂಟ್ರಿಕ್ಸ್ ಸಂಸ್ಥೆಯ ಅಧ್ಯಕ್ಷರು ಹೇಳಿಕೆ ಕೊಡುತ್ತಾರೆ. ಈ ರೀತಿ ಆಗಿರುವುದರಿಂದ ಇದು ಒಂದು ವರ್ಷದಿಂದ ಚರ್ಚೆಯಾಗುತ್ತದೆ. ಹಿಂದಿನ, ಮುಖ್ಯಮಂತ್ರಿಗಳು ಇಲ್ಲಿ ಇದೇ ಸದನದಲ್ಲಿ ಹೇಳಿದರು, ನಾವು ಮುಂದುವರೆಸುತ್ತೇವೆ, ಕಾರ್ಯಾರಂಭ ಮಾಡುತ್ತೇವೆಂದು. ಅದು ಕಾರ್ಯಾರಂಭ ಮಾಡಲಿಲ್ಲ, ಪೂರ್ತಿ ಆಗಲಿಲ್ಲ, ಸಂಬಂಧಪಟ್ಟ ಇಲಾಖೆಯವರೂ ಕೂಡ ತೀವ್ರವಾಗಿ ಹೇಳುತ್ತಿದ್ದಾರೆ. ವಿದ್ಯುಚ್ಛಕ್ತಿ ಉತ್ಪಾದನೆಗೂ ಪ್ರಾರಂಭ ಆಗಲಿಲ್ಲ, ಅದು ಅಂತಿಮ ಒಪ್ಪಂದವೂ ಆಗಲಿಲ್ಲ. ಪ್ರಾರಂಭ ಆಗುವುದಕ್ಕೆ ಸಾಧ್ಯವಾಗದೆ ಇರತಕ್ಕಂತಹ ಪರಿಸ್ಥಿತಿ ಬಂದಿದೆ. ಒಂದೇ ಒಂದು ವಿಷಯ ಹೇಳಬೇಕಾಗಿದೆ. 5,000 ಕೋಟಿ ರೂಪಾಯಿ ಕೊಟ್ಟು ಅವರು ವಿದ್ಯುಚ್ಛಕ್ತಿಗೆ ಕೊಜೆಂಟ್ರಿಕ್ಸ್‌ನಿಂದ ಒಪ್ಪಂದವನ್ನು ಮಾಡುತ್ತಿದ್ದಾರೆ.' ನನಗೆ ಗೊತ್ತಿರತಕ್ಕಂತಹ ಮಾಹಿತಿ ಪ್ರಕಾರ 1500 ಕೋಟಿ ರೂಪಾಯಿ ಖರ್ಚು ಮಾಡಿ ನಮ್ಮ ಟ್ರಾನ್ಸ್‌ಮಿಷನ್ ಸಿಸ್ಟಮ್ ಇಂಪ್ರೂವ್ ಮಾಡಿದರೆ ಇಮ್ಮಿಡಿಯಟ್ಟಾಗಿ ನಮಗೆ ಇರತಕ್ಕಂತಹ ಪ್ರಾಬ್ಲಮ್ ಸಾಲ್ವ್ ಆಗುತ್ತದೆ. 5,000 ಕೋಟಿ ರೂಪಾಯಿ ಖರ್ಚು ಮಾಡಿದರೂ ಕೂಡ ಸುಮಾರು ಐದು ವರ್ಷ ಕನಿಷ್ಟ ಬೇಕಾಗುತ್ತದೆ. ಇದರಿಂದ ಸರ್ಕಾರ ಏನಾದರೂ ಆಲೋಚನೆ ಮಾಡಿದೆಯೊ? ಇದರ ಬಗ್ಗೆ ಏನಾದರೂ ಗಮನ ಹರಿಸಿದೆಯೇ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ವೈ.ರಾಮಕೃಷ್ಣ:- ಸನ್ಮಾನ್ಯ ಶ್ರೀ ಖರ್ಗೆಯವರು ಎತ್ತಿರತಕ್ಕಂತಹ ವಿಚಾರ ಬಹಳ ಗಹನವಾದುದು. ನಮಗೆ ತಿಳಿದ ಪ್ರಕಾರ ಇದನ್ನು ಪ್ರಾರಂಭ ಮಾಡುವಾಗ ಎನ್.ಆರ್.ಐ.ನವರು ಮುಂದೆ ಬಂದಿದ್ದರು, ಅದನ್ನು ತಾವು ಮೊದಲು ಒಪ್ಪಿಕೊಂಡು ಆ ಮೇಲೆ ಅದನ್ನು ಕಾರಣಾಂತರಗಳಿಂದ ರಿಜೆಕ್ಟ್ ಮಾಡಿ ಫಾರಿನ್ ಕಂಪನೀಸ್‌ಗೆ ತಾವು ಅಕ್ಸೆಪ್ಟೆನ್ಸ್ ಕೊಟ್ಟಿದ್ದೀರಿ ಎನ್ನತಕ್ಕಂತಹ ವಿಚಾರ ಓದಿದ್ದೇನೆ. ಜೊತೆಗೆ ಲೋಕ ಸಭೆಯಲ್ಲಿ ಬಂದಿರತಕ್ಕಂತಹ ಅಲಿಗೇಷನ್ ಇವುಗಳನ್ನು ನೋಡಿದಾಗ ಒಂದು ವೈಟ್ ಪೇಪರ್‌ನಲ್ಲಿ, ಇದು ಹೇಗೆ ಪ್ರಾರಂಭವಾಯಿತು, ಈ ತನಕ ಯಾವ ಸ್ಟೇಜ್‌ನಲ್ಲಿ ನಿಂತಿದೆ, ಎಂಬ ಬಗ್ಗೆ ಈ ಸದನಕ್ಕೆ ತಿಳಿಸುವುದಕ್ಕೋಸ್ಕರವಾಗಿ ನಮಗೆ ಅನುಕೂಲ ಆಗುವುದಕ್ಕೋಸ್ಕರವಾಗಿ ಒಂದು ವೈಟ್ ಪೇಪರ್ ಏಕೆ ತಾವು ಪಬ್ಲಿಷ್ ಮಾಡಬಾರದು?

+ಶ್ರೀ ವಾಟಾಳ್ ನಾಗರಾಜ್:- ಈ ಕೊಜೆಂಟ್ರಿಕ್ಸ್ ಯೋಜನೆ ಬಗ್ಗೆ ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಸರಕ್ಕೆ ಬಹಳ ತೀವ್ರವಾದ ಅಪಾಯ ಬಂದಿದೆ ಎಂದು ಹೇಳಿ ದೊಡ್ಡ ಆಂದೋಲನ ನಡೆಯುತ್ತಿದೆ. ಈ ಪರಿಸರ ಕೆಡದ ರೀತಿಯಲ್ಲಿ ಅಲ್ಲಿನ ಯಾವುದೇ ಒಂದು ಹವಾಗುಣವಾಗಲಿ, ಅಲ್ಲಿನ ಜನರಿಗೆ ತೊಂದರೆಯಾಗದ ರೀತಿಯಲ್ಲಿ, ಮೀನುಗಾರರಿಗೆ ತೊಂದರೆಯಾಗದೆ ಇರುವ ರೀತಿಯಲ್ಲಿ ಸರ್ಕಾರ ಏನು ವ್ಯವಸ್ಥೆ ಮಾಡಿದೆ, ಅದಕ್ಕೆ ಯಾವ ಯಾವ ವ್ಯವಸ್ಥೆ ಮೊದಲು ಮಾಡಿ ಆ ಮೇಲೆ ಕೊಜೆಂಟ್ರಿಕ್ಸ್ ಬಗ್ಗೆ ಇವರು ಏನು ಕ್ರಮ ತೆಗೆದುಕೊಂಡಿದ್ದಾರೆ ಅದು ಆಗಲಿಲ್ಲ ಅಂದರೆ ಅಲ್ಲಿ ತೀವ್ರವಾಗಿ ಹೋರಾಟ ನಡೆಯುತ್ತಿದೆ. ನಾವು ಜಮೀನು ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ, ಈಗಾಗಲೇ ಅಲ್ಲಿ ಸಭೆಗಳನ್ನು ನಡೆಸಿದ್ದಾರೆ. ಮತ್ತು ಆ ಕಂಪನಿಗಳವರು ಬಂದ ತಕ್ಷಣ ಅದಕ್ಕೆ ನಾವು ವಿರೋಧ ಮಾಡುತ್ತೇವೆ ಎಂದು ತೀವ್ರವಾದ ಹೋರಾಟ ನಡೆಯುತ್ತಿದೆ. ಈ ಹೋರಾಟದ ಮಧ್ಯೆ ನೀವು ಆ ಜನರನ್ನು ಕಡೆಗಾಣಿಸಿ ಇಲ್ಲಿ ಆ ಒಂದು ಯೋಜನೆ ತರಬೇಕೆಂದು ಉದ್ದೇಶ ಸರ್ಕಾರಕ್ಕೆ ಇದೆಯೇ? ಅದರ ಬಗ್ಗೆ ತಾವು ಹೇಳಿಕೆ ಕೊಡುವಾಗ ಅದನ್ನು ಸ್ಪಷ್ಟಪಡಿಸಬೇಕೆಂದು ಹೇಳುತ್ತೇನೆ.

+ಶ್ರೀ ಹೆಚ್.ಎನ್.ನಂಜೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಈಗ ಪ್ರಾರಂಭದಲ್ಲಿ ಕೊಜೆಂಟ್ರಿಕ್ಸ್ ಪ್ರಾಜೆಕ್ಟ್ ಕಾಸ್ಟ್ ಎಷ್ಟು ಎಂದು ಆಯಿತು? ಆಮೇಲೆ ಏನಾದರೂ ನೆಗೊಸಿಯೇಟ್ ಆಗಿ ಪ್ರಾಜೆಕ್ಟ್ ಕಾಸ್ಟನ್ನು ಕಡಿಮೆ ಮಾಡಿದರೇ? ಇದು ಒಂದು ಪಾಯಿಂಟ್. ಇನ್ನೊಂದು ಪಾಯಿಂಟ್ By the end of the day you would only bring Rs.280 crores thats all ಎಂದು ಒಂದು ವರದಿಯನ್ನು ಓದಿದ್ದು ನೆನಪಿದೆ. ಉಳಿದದ್ದೆಲ್ಲಾ ಇಲ್ಲೇ ಜನರೇಟ್ ಮಾಡುತ್ತಾರೆ. ಇಲ್ಲಿಯೇ ಜನರೇಟ್ ಮಾಡುತ್ತಾರೆಂದರೆ ಈಗ ಅಲ್ಲಿ ಯಾರಾದರು ಇನ್‌ವೆಸ್ಟ್‌ಮೆಂಟ್ ಮಾಡಿದರೆ, ಸಪೋಸ್ ನಾನು ಬ್ಯಾಂಕ್‌ನಲ್ಲಿ ಇಪ್ಪತ್ತು ಲಕ್ಷ ಇಡುತ್ತೇನೆ. 20 ಲಕ್ಷ ಬ್ಯಾಂಕ್‌ನಲ್ಲಿಟ್ಟರೆ ಅವರು ತಿಂಗಳಿಗೆ ಒಂದು ಪರ್ಸೆಂಟ್ ಕೊಡುತ್ತಾರೆ. ವರ್ಷಕ್ಕೆ 12 ಪರ್ಸೆಂಟ್ ಕೊಡುತ್ತಾರೆ. ಅದರಲ್ಲಿ ಡಿಡಕ್ಷನ್ ಇಟ್ ಸೋರ್ಸ್ ಎಂದು ಇನ್‌ಕಂಟ್ಯಾಕ್ಸ್ ಹಿಡಿದುಕೊಳ್ಳುತ್ತಾರೆ. ಕೋಜೆಂಟ್ರಿಕ್ಸ್‌ಗೆ ಅಲ್ಲಿ ಇನ್ವೆಸ್ಟ್ ಮಾಡಿದರೆ 16 ಪರ್ಸೆಂಟ್ ಟ್ಯಾಕ್ಸ್ ಫ್ರೀ. ಇಂತಹ ಅನೇಕ ಸೌಲಭ್ಯಗಳನ್ನು ಒದಗಿಸಿದ್ದಾರೆ. ಈ ಸವಲತ್ತುಗಳನ್ನು ನಮ್ಮ ರಾಷ್ಟ್ರದ ಜನರಿಗೆ ಒದಗಿಸಿದರೆ, ಅದರ ಮುಖಾಂತರ ಬರುವ ಹಣ ನಮಗೇ ನೇರವಾಗಿ ಬರುತ್ತದೆ. ಬಹುಶಃ ಪವರ್ ಕಾರ್ಪೊರೇಷನ್‌ಗೆ ಕೇಂದ್ರ ಸರ್ಕಾರ ಆ ಸೌಲಭ್ಯವನ್ನು ಒದಗಿಸಿದರೆ ಯಾರು ಯಾರು ಪವರ್ ಕಾರ್ಪೊರೇಷನ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡುತ್ತಾರೋ ಅವರಿಗೆ ಟ್ಯಾಕ್ಸ್ ಫ್ರೀ 16 ಪರ್ಸೆಂಟ್ ನಾವು ಇನ್‌ಕಂ ಕೊಡುತ್ತೇವೆಂದು ಹೇಳಿ ಅದಕ್ಕೆ ಕೇಂದ್ರ ಸರ್ಕಾರ ಅವಕಾಶ ಮಾಡಿಕೊಟ್ಟರೆ ಅನುಕೂಲ ಆಗುತ್ತಿರಲಿಲ್ಲವೇ? ಇದನ್ನು ಪರಿಶೀಲಿಸಿದ್ದೀರಾ? ಈ ಸವಲತ್ತನ್ನು ಪವರ್ ಕಾರ್ಪೊರೇಶನ್ ಮುಖಾಂತರ ತೆಗೆದುಕೊಳ್ಳುವುದಕ್ಕೆ ಸರ್ಕಾರ ಏನಾದರೂ ಪ್ರಯತ್ನ ಪಟ್ಟಿದೆಯೇ? ಈ ಕೆಲವು ವಿವರಣೆಯನ್ನು ಕೊಟ್ಟರೆ ಒಳ್ಳೆಯದೆಂದು ನನಗನಿಸುತ್ತದೆ.

+ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ಇದೊಂದು ಕೊಜೆಂಟ್ರಿಕ್ಸ್ ಎನ್ನುವುದು ಇಂಥ ರೂಪ ತಾಳಿದೆ, ಆದರೆ ಅದರ ಅಸಲಿ ರೂಪ ಯಾರಿಗೂ ಗೊತ್ತಿಲ್ಲ. ಅದರ ಬಗ್ಗೆ ವರ್ಣನೆ, ವಿಚಾರ, ವಿಶ್ಲೇಷಣೆ ಎಲ್ಲಾ ಆಗಿದೆ. ಆದ್ದರಿಂದ ಈ ಸದನಕ್ಕೆ ಇವೊತ್ತು ಇದರ ಹುಟ್ಟು ಎಲ್ಲಿ, ಈಗ ಯಾವ ಸ್ಥಿತಿಯಲ್ಲಿದೆ ಎಂದೆಲ್ಲಾ ಹೇಳುತ್ತೇನೆ. 1991ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಲಿಬರಲೈಸೇಶನ್ ಪಾಲಿಸಿ ಅನೌನ್ಸ್ ಮಾಡಿದ ಮೇಲೆ ವಿದೇಶಿ ಬಂಡವಾಳ ಇಲ್ಲಿ ಬರುವುದಕ್ಕೆ ಪ್ರಾರಂಭವಾಯಿತು. ಹೆಚ್ಚು ಕಡಿಮೆ ಪವರ್ ಸೆಕ್ಟಾರ್‌ಗೆ ಬೇರೆ ರಾಜ್ಯಗಳಲ್ಲಿ, ಒರಿಸ್ಸಾ ಇರಬಹುದು, ಮಹಾರಾಷ್ಟ್ರ ಇರಬಹುದು, ಕರ್ನಾಟಕ ಇರಬಹುದು ಪವರ್ ಸೆಕ್ಟಾರ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಲು ಬಹಳ ಜನ ಬಂದರು. ಆ ರೀತಿ ಬರುವುದಕ್ಕೆ ಪ್ರಾರಂಭವಾದ ಮೇಲೆ ನಮ್ಮದೇ ಆದಂಥ ಸರ್ಕಾರದ ಪ್ರತಿನಿಧಿಗಳು 1992ನೇ ಸಾಲಿನಲ್ಲಿ ಅಮೇರಿಕಾಕ್ಕೆ ಹೋಗಿ ಮಾತುಕತೆ ನಡೆಸುವಾಗ ನೀವು ಕರ್ನಾಟಕಕ್ಕೆ ಬರಬೇಕೆಂದು ಕೊಜೆಂಟ್ರಿಕ್ಸ್‌ನವರಿಗೆ ಇನ್‌ವೈಟ್ ಮಾಡಿದರು; ಆಗಿದ್ದ ಮುಖ್ಯಮಂತ್ರಿಗಳು ಹೋಗಿ ಅವರೊಡನೆ ಮಾತುಕತೆ ಆಡಿ ಬಂಗಾರಪ್ಪನವರು ಎಂ.ಓ.ಯು. ಸೈನ್ ಮಾಡಿದರು. ಆ ಎಂ.ಓ.ಯು ಸೈನ್ ಮಾಡಿದಮೇಲೆ ಅವರು ಬಂದು ಸ್ಥಳ ನೋಡಿದರು. ಮೊದಲು ಅವರು ಬೆಂಗಳೂರು ಹಾಗೂ ಮಂಗಳೂರಿನಲ್ಲಿ ಎಂದು ಆಲೋಚನೆ ಮಾಡಿದ್ದರು. ಆದರೆ ಬೆಂಗಳೂರು ಬಹಳ ಕಂಜೆಸ್ಟೆಡ್ ಆಗುತ್ತದೆ ಮೇಲಾಗಿ ಅದಕ್ಕೆ ಬೇಕಾದಷ್ಟು ನೀರು ದೊರೆಯುವುದಿಲ್ಲ ಎಂದು ಹೇಳಿ ಮಂಗಳೂರನ್ನು ಸೆಲೆಕ್ಟ್ ಮಾಡಿದರು. ತಮಗೆ ನೆನಪಿರಬಹುದು, ಹೆಗಡೆಯವರ ಸರ್ಕಾರ ಇದ್ದಾಗ, ನಾನು ಪವರ್ ಮಂತ್ರಿಯಾಗಿದ್ದಾಗ, ಗೋರ್ಬಚಾವ್‌ರವರು ಬಂದಾಗ ಇಲ್ಲಿ ಒಂದು ರಷ್ಯನ್ ಕೊಲ್ಯಾಬ್ರೇಶನ್‌ನಲ್ಲಿ ಸೂಪರ್ ಥರ್ಮಲ್ ಪವರ್ ಪ್ಲ್ಯಾಂಟನ್ನು ಹಾಕಬೇಕೆಂದು ಅಗ್ರಿಮೆಂಟ್ ಆಯಿತು. ಆ ಮೇಲೆ ಸೋವಿಯಟ್ ಯೂನಿಯನ್ ಡಿಸ್‌ಮೆಂಟಲ್ ಆದಮೇಲೆ ಅದರ ಕಡೆಗೆ ಯಾರೂ ನೋಡಲಿಲ್ಲ. ಆ ಜಾಗ ನಂದೀಕೂರ ಹತ್ತಿರ ಎರಡು ಸಾವಿರ ಎಕರೆ ಜಮೀನು ಹಾಗೆಯೇ ಇತ್ತು. ಅದನ್ನು ನಾವು ಆವಾಗ ಎನ್.ಟಿ.ಪಿ.ಸಿ.ಗೆ ಕೊಟ್ಟಿದ್ದೆವು. ಆ ಜಾಗ ಇತ್ತು ಅದಕ್ಕೆ 1993ರಲ್ಲಿ ಅಂದರೆ ಮೊಯಿಲಿಯವರ ಪ್ರಾರಂಭದ ಕಾಲದಲ್ಲಿ ಕೊಜೆಂಟ್ರಿಕ್ಸ್‌ನವರು ಬಂದು ಸ್ಥಳ ಎಲ್ಲಾ ನೋಡಿ ಒಂದು ಡ್ರಾಫ್ಟ್ ಪಿ.ಪಿ.ಎ ಸಹಿತ ಆವಾಗ ಸೈನ್ ಮಾಡಿದರು, Draft power purchase agreement was signed by Moily Govt. MOU was signed by Mr.Bangarapp's Govt. ನಾವು ಬಂದಮೇಲೆ ಯಾರು ಸೈನ್ ಮಾಡಿದ್ದು, ಏನು ಅಂಡರ್‌ಹ್ಯಾಂಡ್, ಏನು ಓವರ್‌ಹ್ಯಾಂಡ್ ಡೀಲಿಂಗ್ ಎಂದು ನೋಡುವುದಕ್ಕೆ ಹೋಗಿಲ್ಲ. ಈಗ ಯಾರಾದರೂ ಅಂಡರ್‌ಹ್ಯಾಂಡ್ ಡೀಲಿಂಗ್ ಮಾತನಾಡಿದರೆ, ಈಗ ಕೋಟಿ ಎನ್ನುವುದು, ಸಾವಿರ ಕೋಟಿ, ನೂರು ಕೋಟಿ ಎನ್ನುವುದು ಕಾಸಿಗೆ ಬರದ ಮಾತಾಗಿದೆ. ಇದನ್ನು ಯಾರೋ ನಮ್ಮ ಪಾರ್ಟಿಯವರು ಹೇಳಿದ್ದಾರೆಂದು ಇದೆ. ಅವರಿಗೆ ಏನಾದರೂ ವಾಸ್ತವಿಕ ಜ್ಞಾನ ಇದ್ದರೆ, ಇದು ಯಾವಾಗ ಆಯಿತು ಏನಾಯಿತು

ಎಂದು ಗೊತ್ತಿಲ್ಲದೆ ದೇವೇಗೌಡರ ಮೇಲೆ ಆಪಾದನೆ ಮಾಡಿದರೆ? ಅದಕ್ಕೆ ಹೇಳುವುದು ಇಂಥ ಮೂರ್ಖತನಕ್ಕೆ ನಾವು ಇವೊತ್ತು ಆನುವು ಮಾಡಿಕೊಡಬಾರದು. ವಿಷಯ ತಿಳಿದುಕೊಳ್ಳಬೇಕು. ಏನಾದರೂ ಇದ್ದರೆ ಆಗ ಹೇಳಲಿ ಅದಕ್ಕೆ ಏನು ಬೇಕಾದರೂ ಶಿಕ್ಷೆಯಾಗಲಿ. ಈಗ ಏನೂ ಗೊತ್ತಿಲ್ಲದೆ, ಎಂ.ಒ.ಯು ಸೈನ್ ಮಾಡಿದವರು ಒಬ್ಬರು, ಪಿಪಿಎ ಸೈನ್ ಮಾಡಿದವರೊಬ್ಬರು, ನಾವು ಬಂದ ತಕ್ಷಣ ಅವರಿಗೆ ಮೂರು ತಿಂಗಳೊಳಗೆ ನೀವು ಪ್ರಾರಂಭ ಮಾಡದಿದ್ದರೆ ಬಿಟ್ಟು ಹೋಗಿರಿ ಎಂದರೆ? We were looking at the only time factor ತಡ ಆಗಬಾರದು, ನಮಗೆ ಆದಷ್ಟು ಬೇಗ ಪವರ್ ಬ್ರಗಬೇಕು ಎನ್ನುವ ಕಾರಣದಿಂದ ಇವರು ಹೇಳಿದರು ಅವರು ಬಂದರು. ಅವರು ಬಂದಮೇಲೆ ನಮ್ಮ ಸರ್ಕಾರ ಡ್ರಾಫ್ಟ್ ಪಿ.ಪಿ.ಎ.ಯನ್ನು, ಅವರನ್ನೂ ಕೂಡಿಸಿಕೊಂಡು ಐದಾರು ತಿಂಗಳುಗಟ್ಟಲೇ ಕ್ಲಾಸ್ ಬೈ ಕ್ಲಾಸ್ ಏನೆಂದು ಹೇಳಿ ಕನ್‌ಕ್ಲೂಷನ್‌ಗೆ ಬಂದು ರಾಜ್ಯ ಸರ್ಕಾರ, ಪೊಲ್ಯೂಷನ್ ಕಂಟ್ರೋಲ್ ಬೋರ್ಡ್, ಪಿ.ಪಿ.ಎ ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ಡಾಕ್ಯೂಮೆಂಟ್ಸ್ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಆಗ ಡಾ: ಮನಮೋಹನ್‌ಸಿಂಗ್‌ರವರು ಹಣಕಾಸು ಸಚಿವರಾಗಿದ್ದರು. ಅವರು ಕೆಲವೊಂದು ಅಬ್ಜೆಕ್ಷನ್ ಮಾಡಿದರು. ಏಕೆಂದರೆ ಕೇಂದ್ರ ಸರ್ಕಾರ ಇವೊತ್ತು ನಾವು ಕ್ಲಿಯರ್ ಮಾಡಿಲ್ಲ ಎಂದು ಪ್ರಧಾನ ಮಂತ್ರಿಗಳು ಹೇಳುವಂಥದ್ದಿದೆ ಅದು ತಪ್ಪಿಲ್ಲ. ಅರ್ಥ ಇಷ್ಟೇ; ನಾನು ಕ್ಲಿಯರ್ ಆಗಿದೆ ಎಂದು ಹೇಳುವುದೂ ನಿಜ ಕೇಂದ್ರ ಸರ್ಕಾರದಲ್ಲಿ ಅದು ಏನು ಕ್ಲಿಯರ್ ಆಗಿಲ್ಲ ಎನ್ನುವುದೂ ನಿಜ. ಖರ್ಗೆಯವರೇ ಇದಕ್ಕೆ ಕನ್‌ಫ್ಯೂಜನ್ ಎಲ್ಲಿದೆ ಎಂದರೆ ಕೇಂದ್ರ ಸರ್ಕಾರ ಎಂದರೆ ಅದು ಏನೋ ಒಂದು ಕಂಬ ಅಲ್ಲ. ಅಲ್ಲಿ ಎಕಾನಾಮಿಕ್ಸ್ ಅಫೇರ್ಸ್ ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ, ಎನ್‌ವಿರಾನ್‌ಮೆಂಟ್ ಕ್ಲಿಯರ್ ಮಾಡುವುದು. ಕೊನೆಗೆ ಫೈನಾನ್ಸ್ ಮಿನಿಸ್ಟ್ರಿಗೆ ಬಂದು ಕೌಂಟರ್ ಗ್ಯಾರಂಟಿ ಎಂದು ಈ ಕೌಂಟರ್ ಗ್ಯಾರಂಟಿ ಎಂಬ ಪದವೇ ನಮಗೆ ಗೊತ್ತಿರಲಿಲ್ಲ. ಕೌಂಟರ್ ಗ್ಯಾರಂಟಿ ಬಂದದ್ದು ಯಾವಾಗ ಮನಮೋಹನ್‌ಸಿಂಗ್‌ರವರ ಕಾಲದಲ್ಲಿ. ಅವರು ಎಂಟು ಫಾಸ್ಟ್ ಟ್ರಾಕ್ ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಿದರು. ಕೇಂದ್ರ ಸರ್ಕಾರದವರು ಏನು ಹೇಳಿದರು ಎಂದರೆ. ನೀವು ಬನ್ನಿ, ಇನ್‌ವೆಸ್ಟ್ ಮಾಡಿ, ನೀವು ಆದಷ್ಟು ಬೇಗ ಪವರ್ ಜನರೇಟ್ ಮಾಡಿ, ಬೇಕಾದರೆ ನಾವು ಕೇಂದ್ರ ಸರ್ಕಾರವೇ ಗ್ಯಾರಂಟಿ ನಿಲ್ಲುತ್ತೇವೆ, ಏಕೆಂದರೆ ರಾಜ್ಯ ಸರ್ಕಾರದ ಕೈಯಲ್ಲಿ ಆಗುತ್ತೋ ಇಲ್ಲವೋ ಎಂದು ಅವರು ಹೇಳಿದರು. ಕೌಂಟರ್ ಗ್ಯಾರಂಟಿಯ ಮಾತು. ನಾವು ಆಯಿತು ಎಂದು ಹೇಳಿದೆವು. ಬೇರೆ ಕಡೆ ಓರಿಸ್ಸಾ, ಮಹಾರಾಷ್ಟ್ರ, ಗುಜರಾತ್ ಹೀಗೆ ಐದಾರು ಪ್ರಾಜೆಕ್ಟ್‌ಗಳಲ್ಲಿ ಕೌಂಟರ್ ಗ್ಯಾರಂಟಿ ಅವರೇ ಕೊಟ್ಟುಕೊಂಡರು. ಇದನ್ನು ಕೊಜೆಂಟ್ರಿಕ್ಸ್‌ದು ಒಪ್ಪಲಿಲ್ಲ. ಹಾಗೆಂದರೆ ಅವರು ರಿಜೆಕ್ಟ್ ಮಾಡಲಿಲ್ಲ. ಮತ್ತೊಂದು ಸಾರಿ ರೀಕನ್ಸಿಡರ್ ಮಾಡಿ ಎಂದು ಹೇಳಿ ಅಕ್ಷರಶಃ ವರ್ಡ್ ಬೈ ವರ್ಡ್ ನೋಡಿ ಇಂಪ್ಲಿಕೇಶನ್ಸ್ ಏನಾಗುತ್ತದೆ ಎಂದು ಹೇಳಿದರು. ಎಂ.ಒ.ಯು. ಸೈನ್ ಮಾಡಿದಾಗ ಮೊದಲು ಪ್ರಾಜೆಕ್ಟ್ ಕಾಸ್ಟ್ 5088 ಕೋಟಿ ಇತ್ತು. Project cost of this Cojentrix was 5088 crores. ಆ ಮೇಲೆ

ಮೊಯಿಲಿಯವರ ಕಾಲದಲ್ಲಿ ಪಿ.ಪಿ.ಎ. ಸೈನ್ ಮಾಡುವಾಗ ಅದನ್ನೆಲ್ಲಾ ಸ್ಟ್ರೀಮ್ ಡೌನ್ ಮಾಡಿ, ಮಾಡಿ, ಮಾಡಿ, 4387 ಕೋಟಿ ರೂಪಾಯಿಗೆ ಬಂತು. ಆಮೇಲೆ ನಮ್ಮ ಸರ್ಕಾರ ಬಂದಮೇಲೆ ನಮ್ಮ ಅಧಿಕಾರಿಗಳು, ಕೊಜೆಂಟ್ರಿಕ್ಸ್‌ನವರು, ಕೇಂದ್ರ ಸರ್ಕಾರದವರು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರು ಎಲ್ಲಾ ಸೇರಿ ಮತ್ತೆ ರಿವ್ಯೂ ಮಾಡಿದ ಮೇಲೆ ಅಲ್ಲಿ ಪ್ರಾಜೆಕ್ಟ್ ಕಾಸ್ಟ್ ಏನೆಂದರೆ ಕೊಜೆಂಟ್ರಿಕ್ಸ್‌ರವರು ಹಣ ಕೊಡಬಹುದು ಅಥವಾ ಕೊಜೆಂಟ್ರಿಕ್ಸ್ ಒಂದು ಕನ್‌ಸಾರ್ಟಿಯಂ ಇರಬಹುದು, ಅವರು ಹಣ ಕೊಡಬಹುದು. ಇನ್ನು ಉಳಿದ ಪ್ಲಾಂಟ್ ಹೇಗೆ ಮಾಡುತ್ತೀರಿ ಎಂದು ಕೇಳುತ್ತಾರೆ. ಕೂಲಿಂಗ್ ಟವರ್ ಮಾಡುವವರು ಯಾರು, ಟವರ್ ಯಾರು ಕಟ್ಟುತ್ತಾರೆ, ಅದರೊಳಗೆ ಬೇರೆ ಬೇರೆ ಕಾಂಪೊನೆಂಟ್ಸ್ ಇರುತ್ತದೆ. ಅದಕ್ಕೆ ಇಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಕಾಸ್ಟ್ E.P.C ಎಂದು ಹೇಳುತ್ತಾರೆ. ಇಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಕಾಸ್ಟ್ ಎಷ್ಟು ಎಂದು ಗೊತ್ತಾಗಬೇಕಾದರೆ ಪ್ರತಿಯೊಂದು ಐಟಂನ ಮೇಲೆ ಕೊಜೆಂಟ್ರಿಕ್ಸ್‌ನವರು ಟೆಂಡರನ್ನು ಕರೆದರು. ಆ ಟೆಂಡರನಲ್ಲಿ ಸುಮಾರು ಏಳು ಇಂಟರ್‌ನ್ಯಾಶನಲ್ ಬಿಡ್ಡರ್ಸ್ ಬಂದರು. ಕಾಸ್ಟ್ ಎವ್ಯಾಲ್ಯೂಯೇಶನ್ ಬಂತು. ಅದು ಆದಮೇಲೆ ನಾವು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರು ಎಕನಾಮಿಕ್ ಅಫೇರ್ಸ್ ಕಮಿಟಿಯವರು ಎಲ್ಲಾ ಕುಳಿತು ಮಾಡಿದ ಮೇಲೆ ಕಾಸ್ಟ್ ಎಲ್ಲಿಗೆ ಬಂತು ಎಂದರೆ ಮೊದಲು 5088 ಕೋಟಿ ಇತ್ತು. ಫಾರಿನ್ ಇನ್‌ವೆಸ್ಟ್‌ಮೆಂಟ್ ಪ್ರಮೋಷನ್ ಬೋರ್ಡ್ ಕ್ಲಿಯರನ್ಸ್ ಆದದ್ದು 5088 ಕೋಟಿ ಇದ್ದದ್ದು, 1994ನೇ ಇಸ್ವಿಯಲ್ಲಿ ಪಿ.ಪಿ.ಎ. ಸೈನ್ ಮಾಡಿದಾಗ 4387 ಕೋಟಿ ಅಂದರೆ ಆ್ಯಸ್ ಆನ್ 1997 ಎಂದು. ನಮ್ಮದು ಇನಿಶಿಯಲ್ ಪಿ.ಪಿ.ಎ. ನಾವು revise ಮಾಡಿದಾಗ ಪಿ.ಪಿ.ಎ. 4298 ಕೋಟಿ ರೂಪಾಯಿ ಆ್ಯಸ್ ಆನ್ 2000 ಕೊನೆಗೆ ಆ್ಯಸ್ ಕ್ಲಿಯರ್ಡ್ ಬೈ ಸಿ.ಇ.ಎ ಆ್ಯಂಡ್ ಟೆಕ್ನೊ ಎಕಾನಾಮಿಕ್ ಕಮಿಟಿ ಎಂದು ಇದೆ, ಅದರ ಪ್ರತಿಯೊಂದು ಕಾಸ್ಟನ್ನು ಲೆಕ್ಕ ಹಾಕಿ ಅದು 3948.35 ಕ್ರೋರ್ಸ್ ಆ್ಯಸ್ ಆನ್ 2000. ಇದು ಇಲ್ಲಿಗೆ ಬಂದಿದೆ.

ಅವರು ಫಾರಿನ್ ಇನ್‌ವೆಸ್ಟ್‌ಮೆಂಟ್ ವಿಚಾರದಲ್ಲಿ ಯಾವ್ಯಾವುದರ ಮೇಲೆ ಫಾರಿನ್ ಇನ್‌ವೆಸ್ಟ್‌ಮೆಂಟ್, ಲೋಕಲ್, ಬಿ.ಹೆಚ್.ಇ.ಎಲ್.ನವರಿಗೆ ಯಾವುದು ಕೊಡಬೇಕು, ಜಪಾನೀ ಕಂಪನಿಗೆ ಯಾವುದು ಕೊಡಬೇಕು ಎಂಬುದನ್ನೆಲ್ಲಾ ಅವರು ನೋಡಿಕೊಂಡು ಕೊಜೆಂಟ್ರಿಕ್ಸ್‌ನವರು ಕೊನೆಗೆ ಸಿ.ಇ.ಎ. ಹತ್ತಿರ ಕ್ಲಿಯರ್ ಆದಾಗ ಒಂದು ಯುನಿಟ್‌ಗೆ ಇಷ್ಟು ಆಗುತ್ತದೆ ಎಂದು ಬಂದರು. ಆ ಕಾಸ್ಟ್ ರೂ.2-90ರಿಂದ 2-70, 2-58, 2-30, 2-35ಕ್ಕೆ ಈಗ ಬಂದಿಳಿದಿದೆ. This is not legally enforceable document. This is only an exercise. When the Finance Ministry approves and gives counter guarantee, then we can enforce it. We can enforce against Cogentrix and Cogentrix can enforce against the Goverment of India. ಆಗ ಎನ್‌ಫೋರ್ಸ್‌ಬಲ್ ರೈಟ್ ಬರುತ್ತದೆ. ಅಲ್ಲಿಯವರೆಗೆ ಬರುವುದಿಲ್ಲ. ಮಾನ್ಯ

ಪ್ರಧಾನಮಂತ್ರಿಗಳು ಕೇಂದ್ರ ಸರ್ಕಾರ ಇನ್ನೂ ಕ್ಲಿಯರ್ ಮಾಡಿಲ್ಲವೆಂದು ಹೇಳುವುದು ಈ ಕಾರಣಕ್ಕೋಸ್ಕರ. ನಾನು ಕ್ಲಿಯರ್ ಆಗಿದೆ ಎಂದು ಹೇಳಿದ್ದು, ನಮ್ಮ ರಾಜ್ಯ ಸರ್ಕಾರ ಇಷ್ಟು ವರ್ಷ ಮಾಡಿರುವ ಎಲ್ಲಾ ಸಾಹಸ, ಅದರ ಮೇಲೆ ಮಾಡಿರುವ ಎಕ್ಸ್‌ರ್‌ಸೈಸ್. ಅದು ಎಲ್ಲಾ ಸೇರಿಸಿಕೊಂಡು ಈಗ ಕೊನೆಗೆ ತೆಗೆದುಕೊಂಡು ಹೋಗಿ, ಟೆಕ್ನೋ ಎಕಾನಾಮಿಕ್ ಕಮಿಟಿ, ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ, ಪವರ್ ಮಿನಿಸ್ಟ್ರಿ ಇವನ್ನೆಲ್ಲಾ ಎಕ್ಸರ್‌ಸೈಸ್ ಮಾಡಿ ಮಾಡಿ ಮಾಡಿ ಈಗ ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಯವರ ಮುಂದಿದೆ. ಈ ಹಿಂದೆ ಮನಮೋಹನ್‌ಸಿಂಗ್‌ರವರು ಹಣಕಾಸಿನ ಮಂತ್ರಿಯಾಗಿದ್ದಾಗ ಇದು ಹೋದಾಗ ರಿಜೆಕ್ಟ್ ಏಕೆ ಮಾಡಿದರು ಎಂದರೆ ನೀವು ಸರಿಯಾಗಿ ಇದನ್ನು ಪ್ರಿಪೇರ್ ಮಾಡಿಲ್ಲ, ಇವ್ಯಾಲ್ಯುವೇಶನ್ ಸರಿಯಿಲ್ಲ, ಸೈಂಟಿಫಿಕ್ ಆಗಿ ಇದನ್ನು ಅಸೆಸ್ ಮಾಡಿಲ್ಲವೆಂದು ಹೇಳಿ ಇದನ್ನು ಬಿಟ್ಟುಬಿಟ್ಟರು. ಆ ರೀತಿ ರಿಜೆಕ್ಟ್ ಮಾಡಿದ್ದನ್ನು ಈಗ ನಾವು ಕಳೆದು ತಿಂಗಳು ಹಣಕಾಸಿನ ಮಂತ್ರಿಗಳಿಂದ ಅಪ್ರೂವಲ್‌ಗಾಗಿ ಕೇಳಿದ್ದೇವೆ. ಇದಲ್ಲದೇ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಇದನ್ನು ಆದಷ್ಟು ಬೇಗ ಕಳುಹಿಸಿಕೊಡಬೇಕೆಂದು ಕೇಳಿದ್ದೇವೆ. The matter is before the Government of India and now the Prime Minister and the Finance Minister they will have to give a final assent. ಒಂದು ಮುದ್ರೆಯನ್ನು ಒತ್ತಬೇಕು. ಈಗ ಫೈನಾನ್ಸ್ ಮಿನಿಸ್ಟ್ರಿಯವರು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರ ಇವ್ಯಾಲ್ಯುವೇಶನ್ ಏನಿದೆ, ನಮ್ಮದೇನಿದೆ ಅದನ್ನೆಲ್ಲಾ ನೋಡಿದ್ದಾರೆ, It has gone through that process. ಇಲ್ಲಿ ಈಗಾಗಲೇ ಎಲ್ಲಾ ಕೆಲಸ ಮುಗಿದಿದೆ, ಭೂಮಿಯನ್ನು ಕೂಡ ಎನ್.ಟಿ.ಪಿ.ಸಿ.ಯವರಿಂದ ವಾಪಸ್ಸು ಪಡೆದುಕೊಂಡು ಇವರಿಗೆ ಹ್ಯಾಂಡ್ ಓವರ್ ಮಾಡಿದ್ದೇವೆ. ಫೈನಲ್ ಅಪ್ರೂವಲ್ ನಮಗೆ ಕೊಟ್ಟರೆ ನೀವು ಹೋಗಿ ಕೆಲಸ ಶುರು ಮಾಡಬಹುದು ಎಂದು ಕೊಜೆಂಟ್ರಿಕ್ಸ್‌ನವರಿಗೆ ತಿಳಿಸಿದ್ದೇವೆ. ಅಂದರೆ ಈ ಹಂತದವರೆಗೆ ನಾವು ಬಂದಿದ್ದೇವೆ. ಈಗ ಅದು ಕ್ಲಿಯರ್ ಆದರೆ ಇನ್ನೂ ಮೂರು ವರ್ಷ ಬೇಕು ನಮಗೆ ಜನರೇಶನ್‌ಗಾಗಿ. ಇನ್ನೊಂದು ತಿಂಗಳಲ್ಲಿ ಕೆಲಸವನ್ನು ಅವರು ಪ್ರಾರಂಭ ಮಾಡಿದರೂ ಕೂಡ ನಾವು 1000 ಮೆಗಾವ್ಯಾಟ್ ವಿದ್ಯುತ್ ಪಡೆಯಲು ಇನ್ನೂ ಮೂರು ವರ್ಷ ಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಅಂಡರ್ ಹ್ಯಾಂಡ್ ಡೀಲಿಂಗ್ ಯಾರದು? ನನಗೆ ತಿಳಿದ ಮಟ್ಟಿಗೆ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ, ನಾನು ಇಂಧನ ಖಾತೆಯ ಮಂತ್ರಿಯಾಗಿದ್ದಾಗ ಯಾವ ಅಂಡರ್ ಇಲ್ಲ, ಓವರ್ ಇಲ್ಲ ಹ್ಯಾಂಡ್ ಇಲ್ಲ. ಹಿಂದೆ ನಡೆದದ್ದನ್ನೆ ನಾವು ಹಾಗೆಯೇ ಅದನ್ನು ಅಪ್ರೂವ್ ಮಾಡಿ ಅದನ್ನೇನು ಪ್ರೂವ್ ಮಾಡಬೇಕು, ಸೈಂಟಿಫಿಕಲಿ ಅದನ್ನೇನು ಪ್ರೊಸಸ್ ಮಾಡಬೇಕು ಅದನ್ನು ಮಾಡಿ ಕಳುಹಿಸಿಕೊಟ್ಟಿದ್ದೇವೆಯೇ ಹೊರತು, ಮೇನಕಾ ಗಾಂಧಿಯವರು ಇದರ ಬಗ್ಗೆ ತಮಗೆ ತಿಳುವಳಿಕೆ ಇಲ್ಲದಿದ್ದರೆ, ತಿಳುವಳಿಕೆ ಪಡೆದುಕೊಳ್ಳಬೇಕು, ಇಂಥದ್ದದ್ದನ್ನೆಲ್ಲಾ ಹೇಳುವುದು ಬಾಯಿಗೆ ಬಂದ ಹಾಗೆ, ಅವನು ತೆಗೆದುಕೊಂಡಿದ್ದಾನೆ, ಇವನು ತೆಗೆದುಕೊಂಡಿದ್ದಾನೆ ಎಂದು ಬೇಜವಾಬ್ದಾರಿಯಿಂದ

ಹೇಳಬಾರದು. ಅವರು ಯಾವ ಪಾರ್ಟಿಯಲ್ಲಾದರೂ ಇರಲಿ, ನಾನು ಎನ್‌ವೈರ್‌ನ್‌ಮೆಂಟ್ ಬಗ್ಗೆ ಅವರು ಅಬ್ಜೆಕ್ಟ್ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೆ. ಎನ್‌ವೈರ್‌ನ್‌ಮೆಂಟ್ ಬಗ್ಗೆಯಾಗಲೀ ಸೆಂಟ್ರಲ್ ಎನ್‌ವೈರ್‌ನ್‌ಮೆಂಟ್ ಕಮಿಟಿ ಅಥವಾ ಸ್ಟೇಜ್ ಪೊಲ್ಯುಶನ್ ಕಂಟ್ರೋಲ್ ಬೋರ್ಡ್, ಮತ್ತು ತಾವು ಹೇಳಿದಿರಿ ಮಂಗಳೂರಿನಲ್ಲಿ ಬಹಳ ಹೋರಾಟ ಆಗುತ್ತದೆಂದು. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ವಾಟಾಳ್‌ರವರೇ ಇಲ್ಲಿ ಹೋರಾಟ ಮಾಡುವುದು ಸ್ವಾಭಾವಿಕವಾಗಿ ಏನೇ ಒಂದು ಪ್ರಾಜೆಕ್ಟ್ ಮಾಡುತ್ತೇವೆ ಎಂದ ತಕ್ಷಣ ಹೋರಾಟ ಮಾಡುವವರು ಇದ್ದೇ ಇರುತ್ತಾರೆ. ಆದರೆ ಇಲ್ಲಿ ಹೋರಾಟ ಮಾಡುವವರಿಗೆ ನಾನು ಇಷ್ಟೇ ಮನವಿಯನ್ನು ಮಾಡಿಕೊಳ್ಳುವುದು. ನೀವು ಎಲೆಕ್ಟ್ರಿಸಿಟಿ ಜನರೇಟ್ ಮಾಡದಿದ್ದರೆ ಈ ರಾಜ್ಯದ ಆರ್ಥಿಕ ಪ್ರಗತಿಯಾಗಲೀ ಅಥವಾ ರಾಜ್ಯದಲ್ಲಿರತಕ್ಕ ಕೈಗಾರಿಕಾ ಪ್ರಗತಿಯಾಗಲೀ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಈ ರೀತಿ ಪವರ್ ಪ್ರಾಜೆಕ್ಟ್‌ಗಳನ್ನು ಒಂದು ಕಡೆಯಿಂದ ತಡೆಯುವುದು, ಇನ್ನೊಂದು ಕಡೆಯಿಂದ ನಮಗೆ ಲೋಡ್ ಶೆಡ್ಡಿಂಗ್ ಬೇಡ, ಪವರ್ ಕಟ್ ಬೇಡ ಎಂದು ಹೇಳುವುದು. ಇದನ್ನು ಎನ್‌ವೈರ್‌ನ್‌ಮೆಂಟಲಿಸ್ಟ್‌ಗೂ ನಾನು ಅಪೀಲ್ ಮಾಡಿಕೊಂಡಿದ್ದೇನೆ. ಹೆಬ್ಬಿಕರ್‌ರವರನ್ನು ಕರೆದು ನಾನು ಮಾತನಾಡಿದ್ದೇನೆ. ಅದಷ್ಟು ಕಡಿಮೆ, ಈ ಜಗತ್ತಿನಲ್ಲಿ ಎಲ್ಲಾ ಕಡೆ ಥರ್ಮಲ್ ಪವರ್ ಕೆಲವು ಕಡೆ ಅಟಾಮಿಕ್ ಪವರ್ಸ್, ಫಾನ್ಸ್‌ನಂಥ ಕಡೆ ಶೇಕಡ 60 ಭಾಗ ಅಟಾಮಿಕ್ ಪವರ್ಸ್. ಎಲ್ಲಿ ಅಟಾಮಿಕ್ ಪವರ್ಸ್ ಪ್ಲಾಂಟ್ಸ್ ಇರುತ್ತವೆ ಅಲ್ಲಿ both quality and quantity of power will be steady for forty years. ನಲವತ್ತು ವರ್ಷ ಏನೂ ತೊಂದರೆಯಿಲ್ಲ. ಈಗ ಜಲ ವಿದ್ಯುತ್ ಯೋಜನೆಗಳಲ್ಲಿ ನಾವು ಮಳೆಯನ್ನೇ ನಂಬಿಕೊಂಡಿರಬೇಕಾಗುತ್ತದೆ. ಇಲ್ಲಿ ಮಳೆ ಬಂದರೆ ಉಂಟು, ಮಳೆ ಇಲ್ಲದಿದ್ದರೆ ಇಲ್ಲ. ಇವು ವೆರಿಯೇಶನ್ಸ್‌ಗಳಾಗುವಂಥದ್ದು. ಕೋಲ್‌ನ್ನು ಬರ್ನ್ ಮಾಡಿ, ಆಯಿಲ್ ಬರ್ನ್ ಮಾಡಿ ನಾಫ್ತಾ ಬರ್ನ್ ಮಾಡಿ ಅಥವಾ ನ್ಯಾಚುರಲ್ ಗ್ಯಾಸ್ ಬರ್ನ್ ಮಾಡಿ ನೀವು ಎಲೆಕ್ಟ್ರಿಸಿಟಿ ಉತ್ಪಾದನೆ ಮಾಡುವಾಗ ಏರಿಯಾ ಬೈ ಏರಿಯಾ ಕಾಸ್ಟ್ ವೇರಿಯೇಶನ್ಸ್ ಇರುತ್ತದೆ. ಅದಕ್ಕೋಸ್ಕರ ಇಲ್ಲಿ ಪೊಲ್ಯುಶನ್‌ನ್ನು ಕಡಿಮೆ ಮಾಡಬೇಕು. ನಾವು ಬೆಂಗಳೂರಿನಲ್ಲಿ ಏನು 8 ಲಕ್ಷ ಕಾರುಗಳನ್ನು ಓಡಿಸುತ್ತಿದ್ದೇವೆ, ಇವುಗಳಿಂದ ಆಗುವ ಪೊಲ್ಯುಶನ್ 8 ಥರ್ಮಲ್ ಪವರ್ ಪ್ಲಾಂಟ್‌ಗಳಿಗಿಂತ ಹೆಚ್ಚಾಗಿರುತ್ತದೆ. ಈ ಪೊಲ್ಯುಶನ್ ವಿಚಾರ ಬೇರೆ, ಎನ್‌ವೈರ್‌ನ್‌ಮೆಂಟ್ ವಿಚಾರ ಬೇರೆ, ಅದಕ್ಕೆ ನಾನು ಒಪ್ಪುತ್ತೇನೆ. ಎನ್‌ವೈರ್‌ನ್‌ಮೆಂಟಲಿಸ್ಟ್‌ಗೆ ಇಷ್ಟೇ ಹೇಳುವುದು, ನಾವು ಏನಾದರೂ ಸುಟ್ಟು ಇವೊತ್ತು ಅಡಿಗೆ ಮಾಡಬೇಕು, ಸುಡದೇ ಏನೂ ಅಡಿಗೆ ಮಾಡುವುದಕ್ಕೆ ಆಗುವುದಿಲ್ಲ. ಸೂರ್ಯನ ಬೆಳಕಿನಿಂದಲಾದರೂ ಸುಡಬಹುದು ಅದರೆ ಅದನ್ನು ಎಲೆಕ್ಟ್ರಿಸಿಟಿಯಾಗಿ ಕನ್‌ವರ್ಟ್ ಮಾಡುವುದರಿಂದ, ಕಟ್ಟಿಗೆಯನ್ನು ಸುಡಬಹುದು, ಕಲ್ಲಿದ್ದಲ್ಲನ್ನು ಸುಡಬಹುದು, ಎಣ್ಣೆ ಸುಡಬಹುದು ಒಟ್ಟಿನಲ್ಲಿ ಏನಾದರೂ ಮಾಡಿ ಸುಟ್ಟು 18 ಕೋಟಿ ಟನ್ ಆಹಾರವನ್ನು ನಾವು ಪ್ರತಿ ವರ್ಷ ಸುಡುವುದು. ಈ 18 ಕೋಟಿ ಟನ್ ಆಹಾರವನ್ನು ನಾವು

ಸುಡಬೇಕಾದರೆ 18 ಕೋಟಿ ಟನ್ ಎನರ್ಜಿಯನ್ನು you have to use energy. ಅದಕ್ಕೆ ನಾನು ಎನ್‌ವೈರ್ನ್‌ಮೆಂಟಲಿಸ್ಟ್‌ಗೂ ಹೇಳುವಾಗ, ಅವರು ಹೇಳುವುದು ನಿಜ, ಮಾನವ ಕೋಟಿ ಗಂಡಾಂತರಕ್ಕೆ ಈಡಾಗುತ್ತದೆಂದು ಹೇಳುವುದು ನಿಜ, ನಾನು ಅದನ್ನು ಒಪ್ಪುತ್ತೇನೆ. ಆದರೆ ಈಗ ಬದುಕುವುದು ಹೇಗೆ? ಈಗೇನು ನಾವು ಸೂರ್ಯ ಮುಳುಗುವ ಹೊತ್ತಿಗೆ ಮಲಗುವುದು, ಸೂರ್ಯ ಹುಟ್ಟಿದ ಮೇಲೆ ಏಳಬೇಕು, ಏನನ್ನೂ ಸುಡಬಾರದು, ಎಣ್ಣೆ ಸುಡಬಾರದು, ಅಡಿಗೆ ಮಾಡಬಾರದು, ಹಿಂದೆ ನೇಚರ್‌ನಿಂದ ಗೆಡ್ಡೆ ಗೆಣಸು ತಿಂದು ಮೊದಲಿದ್ದನಲ್ಲ ಮನುಷ್ಯ ಹಾಗಿರಬೇಕು. ಆ ರೀತಿಯಲ್ಲಿರುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು:- ನಿಮಗೆ ಇನ್ನೂ ಅನುಕೂಲವೇ ಆಯಿತು.

ಮಾನ್ಯ ಸದಸ್ಯರು:- ಸೈಕಲ್ ಮೇಲೆ ಎಲ್ಲರನ್ನೂ ಬನ್ನಿ ಎಂದು ಹೇಳಬೇಕು.

ಶ್ರೀ ಜೆ.ಹೆಚ್.ಪಟೇಲ್:- ನಾನು ಹೇಳುತ್ತೇನೆ, ನೀವು ಕಾರ್‌ನಲ್ಲಿ ಬರಬೇಡಿ, ಸೈಕಲ್‌ನಲ್ಲಿ ಬನ್ನಿ ಎಂದು. ಇಲ್ಲಿ ತಾತ್ವಿಕವಾಗಿರತಕ್ಕಂಥ ಇತೋಪಿಯನ್ ಅದು ಬೇರೆ, ವಾಸ್ತವಿಕವಾಗಿ ಇಲ್ಲಿ ಕಾರ್‌ನಲ್ಲಿ ಓಡಾಡುವ ಮನುಷ್ಯ ಇದರ ಬಗ್ಗೆ ಹೇಳುವುದು, ಪರಿಸರದ ಬಗ್ಗೆ ಹೇಳುವುದು, ನಡೆದುಕೊಂಡು ಓಡಾಡುವವರು ಬೇಕಾದರೆ ಪರಿಸರದ ಬಗ್ಗೆ ಹೇಳಲಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಎನ್‌ವಿರಾನ್‌ಮೆಂಟ್‌ಲ್ ಡಿಪಾರ್ಟ್‌ಮೆಂಟನ್ನೇ ನೀವು ವೈಂಡ್‌ಪ್ ಮಾಡಿಬಿಡಿ.

+ ಶ್ರೀ ಜೆ.ಹೆಚ್.ಪಟೇಲ್:- ಡಿಪಾರ್ಟ್‌ಮೆಂಟ್‌ನ್ನು ವೈಂಡಪ್ ಮಾಡಿದರೆ ಈ ಕಾರು ಓಡಿಸುವುದು ನಿಲ್ಲುವುದಿಲ್ಲವಲ್ಲ. ಈ ಡಿಪಾರ್ಟ್‌ಮೆಂಟ್‌ನ್ನು ವೈಂಡಪ್ ಮಾಡಿದರೆ ಚಿಮಣಿಯಲ್ಲಿ ಹೋಗುವ ಹೊಗೆ ನಿಲ್ಲುವುದಿಲ್ಲ. ಹೊಗೆ ಬಂದೇ ಬರುತ್ತದೆ, ಎನ್‌ವೈರ್ನ್‌ಮೆಂಟ್ ಇಷ್ಟು ಕೆಡುತ್ತಿದೆಯಾದ ಕಾರಣ ಇವೊತ್ತು ಎಲ್ಲಾ ರಾಷ್ಟ್ರಗಳು ಆದಷ್ಟು ಈ ಪೊಲ್ಯುಶನ್‌ನ್ನು ಮಿನಿಮೈಸ್ ಹೇಗೆ ಮಾಡಬೇಕೆಂದು ನೋಡುತ್ತಿವೆಯೇ ಹೊರತು ಕಾರ್ಖಾನೆಯನ್ನು ಮುಚ್ಚಿರಿ ಎಂದು ಯಾರೂ ಹೇಳಿಲ್ಲ. ಎಲೆಕ್ಟ್ರಿಸಿಟಿ ಜನರೇಟ್ ಮಾಡಬೇಡಿ ಎಂದು ಯಾರೂ ಹೇಳುವುದಿಲ್ಲ. ನಮ್ಮ ದೇಶದಲ್ಲಿ ಮಾತ್ರ ಇದರ ಬಗ್ಗೆ ವಿಚಿತ್ರವಾಗಿದೆ, ಒಂದು ಕಡೆ ಇದರ ಅವಶ್ಯಕತೆಯೂ ಕಾಣುತ್ತದೆ, ಇನ್ನೊಂದು ಕಡೆ ಅದು ಬೇಡ. ನಮ್ಮದು ದ್ವೈತ, ಅದ್ವೈತ ಅಲ್ಲ. ಈ ರೀತಿ ನಾವು ತತ್ವದಲ್ಲೇ ದ್ವೈತ. ಈ ದೇವರು ಒಂದು ಕಡೆ, ಆ ದೇವರು ಒಂದು ಕಡೆ. ಈ ಕಡೆ ಇಂಡಸ್ಟ್ರಿಯಲೈಸ್ ಮಾಡಿ ಎಂದು ಹೇಳಿದರೆ ಇನ್ನೊಂದು ಕಡೆ ಎಲೆಕ್ಟ್ರಿಸಿಟಿ ಉತ್ಪಾದನೆ ಮಾಡಬೇಡಿ ಎನ್ನುತ್ತಾರೆ. ಇದರ ಬಗ್ಗೆ ಯಾವ ರೀತಿಯಲ್ಲಿ ನಮ್ಮ ದೇಶಕ್ಕೆ ಹೇಳಬೇಕೋ ನನಗೆ ಗೊತ್ತಿಲ್ಲ. ಆದರೆ ಈ ಕೊಜೆಂಟ್ರಿಕ್ಸ್ ಬಗ್ಗೆ ಮಾನ್ಯ ಖರ್ಗೆಯವರೇ, ಇದರೊಳಗೆ ಯಾವುದೇ ಅನುಮಾನಕ್ಕೆ, ಸಂಶಯಕ್ಕೆ ಆಸ್ಪದ ಇಲ್ಲ. ಆದಷ್ಟು ಬೇಗ ಈ ಪ್ರಾಜೆಕ್ಟ್ ಆಗಲೀ ಎಂದು ನಾವು ಕೆಲಸ

ಮಾಡಬೇಕೆ ವಿನಹ ಇದಕ್ಕೇನಾದರೂ ಅಲ್ಲಿ ಏನು ಹುಳುಕು ಇರಬಹುದು, ಇಲ್ಲೇನು ತಪ್ಪಿರಬಹುದು ಎಂದು ಯಾರೋ ಬುದ್ಧಿ ಇಲ್ಲದಿರುವವರು ಹೇಳಿದರೆ ಅದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಡಿ.

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ ರೀತಿ ಬುದ್ಧಿ ಇಲ್ಲದಿರುವವರು ನಿಮ್ಮ ಪಾರ್ಟಿಯಲ್ಲಿ ಇದ್ದಾರೆಂದು ನಮಗೆ ಗೊತ್ತಿರಲಿಲ್ಲ. ಅದಕ್ಕಾಗಿ ನಿಮ್ಮಲ್ಲಿ ಅಂಥವರನ್ನು ಜಾಸ್ತಿ ಸೇರಿಸಿಕೊಂಡಿದ್ದೀರೇನೋ ಅದು ನನಗೆ ಗೊತ್ತಿಲ್ಲ. ಸಂಶಯಕ್ಕೆ ಆಸ್ಪದ ಮಾಡಿಕೊಟ್ಟಿದೆ ಎನ್ನುವ ದೃಷ್ಟಿಯಿಂದ ಈ ಪ್ರಶ್ನೆಯನ್ನು ನಾನು ಎತ್ತಿದೆನೇ ಹೊರತಾಗಿ ಇದು ನನ್ನ ಅಲಿಗೇಶನ್ ಅಲ್ಲ, ನಿಮ್ಮವರದೇ ಅಲಿಗೇಶನ್. ಅದರಿಂದ ಇಡೀ ದೇಶದಲ್ಲಿ ಏನಾಗುತ್ತದೆಂದರೆ, ಏನೋ ಕರ್ನಾಟಕದಲ್ಲಿ ನಡೆದಿದೆ ಎನ್ನತಕ್ಕಂತ ಮಾತುಗಳು ಬರುತ್ತವೆ. ಇತಿಹಾಸ 1991ರಿಂದಲೂ ಇದ್ದರೂ ಕೂಡ ಈಗ ಪ್ರಧಾನ ಮಂತ್ರಿಗಳಾದ ಕಾರಣ ಮತ್ತು ಈಗ ಇವರು ನೇರವಾಗಿ ಆಪಾದನೆಯನ್ನು ಮಾಡಿದ ಕಾರಣ ಅಲ್ಲಿ ಪಾರ್ಲಿಮೆಂಟಿನಿಂದ ಇಡೀ ಜಗತ್ತಿಗೆ ಏನು ಮೆಸೇಜ್ ಹೋಗುತ್ತಿದೆಯೆಂದರೆ ಕರ್ನಾಟಕ ರಾಜ್ಯದಲ್ಲಿ ಇದ್ದಂಥ ಕೊಜೆಂಟ್ರಿಕ್ಸ್ ಪ್ರಾಜೆಕ್ಟ್ ಬಗ್ಗೆ ಪ್ರಧಾನ ಮಂತ್ರಿಗಳು ವಿಶೇಷ ಆಸಕ್ತಿ ತೋರಿಸಿ ಇದರೊಳಗೆ ಏನೋ ಅವ್ಯವಹಾರ ಆಗುತ್ತಿದೆ ಎನ್ನತಕ್ಕಂಥ ಮೆಸೇಜ್ ತಮ್ಮ ಪಾರ್ಟಿಯವರೇ ಕೊಡುತ್ತಿದ್ದಾರೆ, ಅದನ್ನು ತಾವು ಖಂಡಿಸಿದಿರಿ ಅದಕ್ಕಾಗಿ ಧನ್ಯವಾದಗಳು, ಇನ್ನೊಬ್ಬರ ಮೇಲೆ ಸುಮ್ಮಸುಮ್ಮನೇ ಬೀಳಬೇಡಿ. ನೀವು ಒಪ್ಪಿಕೊಳ್ಳಿ, ಎಲ್ಲಿ ನೀವು ಮುರ್ಖತನದ ಕೆಲಸವನ್ನು ಮಾಡುತ್ತೀರೋ ಅಲ್ಲಿಯಾದರೂ ನಾವು ಮೂರ್ಖರಿದ್ದೇವೆಂದು ಒಪ್ಪಿಕೊಳ್ಳಿ, ಪರ್ವಾಗಿಲ್ಲ. ನೀವು ಈಗ ಇದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಅಪ್ರೂವಲ್‌ಗಾಗಿ ಪೆಂಡಿಗ್ ಇದೆ ಎಂದು ಹೇಳಿದಿರಿ. ಅದು ಅಪ್ರೂವಲ್ ಆಗಬೇಕು ಆದಕ್ಕಾಗಿ ಇದು ಇನ್ನೂ ಕ್ಲಿಯರ್ ಆಗಿಲ್ಲವೆಂದು ಪ್ರಧಾನ ಮಂತ್ರಿಗಳು ಹೇಳುತ್ತಿದ್ದಾರೆಂದು ಹೇಳಿದಿರಿ. ಆದರೆ ಪ್ರಾಜೆಕ್ಟ್ ಆ್ಯಸ್ ಸಚ್ ಕರ್ನಾಟಕ ಸರ್ಕಾರದಿಂದ ಕ್ಲಿಯರ್ ಆಗಿದೆ, ಕೇಂದ್ರಸರ್ಕಾರದಲ್ಲೂ ಕೂಡ ಎಲ್ಲಾ ಹಂತದಲ್ಲಿ ಕ್ಲಿಯರ್ ಆಗಿ ಕೇವಲ ಒಂದು ಮುದ್ರೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಆಗಬೇಕು. ಇದು ಮಾತ್ರ ಉಳಿದಿದೆ ಎನ್ನತಕ್ಕಂಥ ಮಾತನ್ನು ನೀವು ಹೇಳಿದಿರಿ. ಇಲ್ಲಿಯೂ ಕೂಡ ಕೌಂಟರ್ ಗ್ಯಾರಂಟಿ ಕೊಡುವುದಕ್ಕೆ ಉಳಿದಿದೆ ಎನ್ನತಕ್ಕಂಥದ್ದನ್ನು ತಾವು ಹೇಳಿದಿರಿ.

11-50 ಎ.ಎಂ

ಇಲ್ಲಿ ಸಂಶಯಕ್ಕೆ ಏಕೆ ಆಸ್ಪದ ಆಯಿತು ಎಂದರೆ ಜಾರ್ಜ್ ಫರ್ನಾಂಡೀಸ್‌ರಾದರೂ ಪ್ರಿವಿಲೇಜ್ ಮೋಷನ್ ತಂದಮೇಲೆ ಜನರಿಗೆ ಈ ರೀತಿ ಸಂಶಯವಾಗಿದೆ. ಏಕೆಂದರೆ ಪಾರ್ಲಿಮೆಂಟ್‌ನಲ್ಲಿ ಈ ವಿಷಯಕ್ಕಾಗಿ ಚರ್ಚೆ ನಡೆದಿದೆ. ಅದಕ್ಕಾಗಿ ನಾವು ಹೇಳಿದನೇ ಹೊರತು ನಾವೇನು ಸುಮ್ಮನೆ ಎತ್ತತಕ್ಕಂಥಾದ್ದು, ಕೇಳತಕ್ಕಂಥಾದ್ದು ಅಲ್ಲ. ಅದು ಹೌಸ್ ಪ್ರೊಸಿಡಿಂಗ್ಸ್‌ನಲ್ಲಿ ಬಂದಿದೆ, ತಾವೂ ಅದನ್ನು ನಿನ್ನೆ ನೋಡಿರಬಹುದು. ಅದೇನೆಂದರೆ ಈ ಪ್ರಾಜೆಕ್ಟ್ ಕ್ಲಿಯರ್ ಆದರೂ ಕೂಡ ಮಾನ್ಯ ಪ್ರಧಾನ ಮಂತ್ರಿಗಳು ಕ್ಲಿಯರ್ ಆಗಿಲ್ಲ

ಎಂದು ಹೇಳಿ ತಪ್ಪು ತಿಳುವಳಿಕೆಯನ್ನು ಈ ಸದನಕ್ಕೆ ಕೊಟ್ಟಿದ್ದಾರೆ ಎಂದು ಅವರು ಪ್ರಿವಿಲೇಜ್ ಮೋಷನ್‌ನ್ನು ಮೂವ್ ಮಾಡಿದ್ದಾರೆ. ಅವರು ತಮ್ಮ ಆತ್ಮ ಸ್ನೇಹಿತರಾದಂತಹ ಜಾರ್ಜ್ ಫರ್ನಾಂಡೀಸ್‌ರವರು. ಮತ್ತೆ ಅವರಿಗೆ ಮೂರ್ಖರು ಎಂದು ಹೇಳುವುದಕ್ಕೆ ಹೋಗಬೇಡಿ, ಇವರಿಗೆ ಏನೋ ಹೇಳಿದಿರಿ ನಡೆದು ಹೋಯಿತು, ಅವರಿಗೂ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಜೆ.ಹೆಚ್.ಪಟೇಲ್:- ಹಿಂದೆ ಮೂರ್ಖರಾಗಿರಲಿಲ್ಲ, ಈಗ ಏಕೋ ಸ್ವಲ್ಪ ವ್ಯತ್ಯಾಸವಾಗಿದೆ.

ಶ್ರೀ ಎಂ.ಮಲ್ಲಿಕಾರ್ಜು ಖರ್ಗೆ:- ಮಾನ್ಯ ಹೆಗಡೆಯವರು ತಮ್ಮನ್ನು ಕೈಬಿಟ್ಟು ಹೋಗಿದ್ದಾರೆ, ಅವರ ಬಗ್ಗೆ ಹೇಳಿ.

ಶ್ರೀ ಜೆ.ಹೆಚ್.ಪಟೇಲ್:- ನೀವು ಪ್ರಾರಂಭ ಮಾಡಿದ್ದು ಕೊಜೆಂಟ್ರಿಕ್ಸ್ ಬಗ್ಗೆ, ಇವೆಲ್ಲಾ ಟ್ರಿಕ್ಸ್ ಬೇಡ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಎಲ್ಲಿ ಇಕ್ಕಟ್ಟು ಬರುತ್ತದೊ ಎಂದು ಇಂತಹ ಟ್ರಿಕ್ಸ್ ತರುತ್ತಾರೆ. ಇಲ್ಲಿ 2 ರೂಪಾಯಿ 37 ಪೈಸೆ ಫೈನಲ್ ಸ್ಟೇಜ್ ಎಂದು ಹೇಳಿ. ಇದು ಚೇಂಜ್ ಆಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇದು ನಿಮ್ಮ ಪ್ರಪೋಸಲ್. ಮತ್ತು ಸೆಂಟ್ರಲ್ ಪವರ್ ಕಾರ್ಪೊರೇಷನ್ ಮತ್ತು ನಮ್ಮ ಪವರ್ ಕಾರ್ಪೊರೇಷನ್ ಎಲ್ಲರೂ ಸೇರಿ ಮಾಡಿ ಒಪ್ಪಿದಂತಹ ನಿಗಧಿ ಪಡಿಸಿದಂತಹ ದರ ಇದು. ಇದಕ್ಕಿಂತ ಕಡಿಮೆ ಆಗತಕ್ಕಂಥ ಸಾಧ್ಯತೆ ಇಲ್ಲ. ಎಕ್ಸ್‌ಪ್ಟ್ ಕೌಂಟರ್ ಗ್ಯಾರಂಟಿ ಬಿಟ್ಟರೆ ಬಾಕಿ ಬದಲಾವಣೆಯಾಗತಕ್ಕಂಥಾದ್ದು ಯಾವುದೂ ಇಲ್ಲ ಎನ್ನತಕ್ಕಂಥಾದ್ದು ಖಚಿತ. ಅದಕ್ಕಾಗಿ ಈ ಸಂಶಯ ಜನರ ಮನಸ್ಸಿನಲ್ಲಿ ಇದ್ದ ಕಾರಣ ಇದನ್ನು ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆ ಪ್ರಿವಿಲೀಜ್ ಮೋಷನ್ ಇದ್ದಕಾರಣ ಇದು ಇನ್ನು ಕ್ಲಿಯರ್ ಆಗಿಲ್ಲ, ಆಗಿದೆ ಎನ್ನುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಅದರ ಬಗ್ಗೆ ತಾವು ಸ್ವಲ್ಪ ಹೇಳಿದರೆ ಅದನ್ನು ನಾನು ಒಪ್ಪುತ್ತೇನೆ.

ಅಧ್ಯಕ್ಷರು:- ಪಾರ್ಲಿಮೆಂಟ್‌ನಲ್ಲಿಡುವ ಪ್ರಿವಿಲೇಜ್ ಮೋಷನ್ ಬಗ್ಗೆ ಅವರು ಏನು ಹೇಳುವುದಕ್ಕಾಗುತ್ತದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಪ್ರಿವಿಲೀಜ್ ಮೋಷನ್ ಬಗ್ಗೆ ಅಲ್ಲ. ಪ್ರಿವಿಲೇಜ್ ಮೋಷನ್ ಎಂದರೆ ನಮಗೆ ಕ್ಲಿಯರ್ ಆಗಿಲ್ಲ ಎಂದು ತಾವು ಹೇಳುತ್ತಿದ್ದೀರಿ, ಆದರೆ ಕ್ಲಿಯರ್ ಆಗಿದೆ ಎಂದು ನಮಗೆ ಗೊತ್ತಿದೆ. ತಾವು ಸದನಕ್ಕೆ ತಪ್ಪು ತಿಳುವಳಿಕೆ ಕೊಡುತ್ತೀರಿ ಎಂದು ಬಂದಿದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

+ಶ್ರೀ ಜೆ.ಹೆಚ್.ಪಟೇಲ್:- ಅಲ್ಲಿ ಏನಾಗಿದೆಯೆಂದರೆ There is some communication gap. The Central Electricity Authority is

a Technical Committee. ಅವರು ಬೇರೆ ಪಾಲಿಸಿ ಮಾಡುವುದಿಲ್ಲ ಯಾವುದು ಕಾಸ್ಟ್ ಎಷ್ಟು? ಕಾಸ್ಟ್ ಎವಾಲ್ಯೂಯೇಷನ್, ಎಂಜಿನಿಯರಿಂಗ್ ಪ್ರಕ್ಯೂರ್‌ಮೆಂಟ್ ಕಾಸ್ಟ್ ಎಷ್ಟು ಅದನ್ನು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ ನೋಡುತ್ತದೆ. ಪವರ್ ಮಿನಿಸ್ಟ್ರಿಯವರು ಜನರಲ್ ಆಗಿ ಕಾನೂನು ಪ್ರಕಾರ ಇದು ಸರಿಯಿದೆಯೇ ಎಂದು ನೋಡುತ್ತಾರೆ. ನಂತರ ಟೆಕ್ನೋ ಎಕಾನಾಮಿಕ್ ಎಂದು ಒಂದು ಕಮಿಟಿ ಇದೆ. ಅವರು ಪ್ರತಿಯೊಂದನ್ನು ಡಿಟೇಲಾಗಿ ಮಾಡಿದಮೇಲೆ ಇದು ಫೈನಾನ್ಸ್ ಮಿನಿಸ್ಟ್ರೀಗೆ ಹೋದಾಗ ಮತ್ತೆ ಅವರು ಒಂದು ಸಲ ನೋಡುತ್ತಾರೆ. ಏಕ್‌ದಂ ಅವರು ಕೌಂಟರ್ ಗ್ಯಾರಂಟಿ ಕೊಡುವುದಿಲ್ಲ. ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯಿಂದ ಅಪ್ರೂವಲ್ ಆದರೆ 99 ಪರ್ಸೆಂಟ್ ಆದಹಾಗೆ ಅದು ಆಗಿದೆ. ಈಗ ಅದು ಫೈನಾನ್ಸ್ ಮಿನಿಸ್ಟ್ರೀ ಮುಂದೆ ಇದೆ. ಈಗ ಎರಡು ರೂಪಾಯಿ 37 ಪೈಸೆ ಇದೆ, ಅವರು ಹೇಳಿದಮೇಲೆ ಅದು ಎರಡು ರೂಪಾಯಿ 30 ಪೈಸೆಗೂ ಬರಬಹುದು. ಇದು ಪಾಜಿಬಿಲಿಟೀಸ್ ಇದೆ. ಅದಕ್ಕೆ ಮಾನ್ಯ ಪ್ರಧಾನ ಮಂತ್ರಿಗಳು ಏನು ಹೇಳಿದ್ದಾದೆಂದರೆ ಇದಕ್ಕೆ ಇನ್ನೂ ಕೇಂದ್ರಸರ್ಕಾರ ಅನುಮತಿ ಕೊಟ್ಟಿಲ್ಲ. ಯಾವ ಪ್ರಿವಿಲೀಜ್ ಅದರಲ್ಲಿ ಏನೂ ಇಲ್ಲ. ಪ್ರಿವಿಲೀಜ್ ಏಕೆ ಹಾಕಿದ್ದಾರೆ ಎಂದು ನಾನು ನೋಡಿದೆ, ಸಿ.ಇ.ಎ.ಕ್ಲಿಯರ್ ಮಾಡಿಲ್ಲ ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ ಎಂದು. ಹಾಗಲ್ಲ, ಸಿ.ಇ.ಎ.ಕ್ಲಿಯರ್ ಮಾಡಿದಮೇಲೂ the Finance Ministry may go through the entire process. What is there for him to mislead the House. He does not want. Actually the whole exercise has been done by me. ಇಲ್ಲಿ ನಾನು ಪವರ್ ಮಿನಿಸ್ಟರ್ ಆಗಿ ಅದನ್ನೆಲ್ಲಾ ಡಿಟೈಲ್ ಆಗಿ ವರ್ಕೌಟ್ ಮಾಡಿದ್ದೇನೆ. ಪ್ರಧಾನ ಮಂತ್ರಿಗಳು ಇಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಅದು ಯಾವ ಸ್ಟೇಜ್‌ನಲ್ಲಿ ಇದೆ ಎಂದು ಕೇಳುತ್ತಿದ್ದರೆ ಹೊರತು....

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ಅಧ್ಯಕ್ಷರೇ, ಕೊಜೆಂಟ್ರಿಕ್ಸ್ ಸಲುವಾಗಿ ಕೋಲ್ ಅನ್ನು ಏನು ಇಂಪೋರ್ಟ್ ಮಾಡಿಕೊಳ್ಳುತ್ತೇವೆ ಅದರಲ್ಲಿ ಸಲ್ಫರ್ ಕಂಟೆಂಟ್ ಜಾಸ್ತಿ ಇದೆ, ಆಸಿಡ್ ರೈನ್ ಆಗುತ್ತದೆ ಎಂದು ಒಂದು ಅಬ್ಜೆಕ್ಷನ್ ರೈಜ್ ಮಾಡಿದ್ದಾರೆ ಮತ್ತು ಕೊನೆಗೆ ಸಮುದ್ರಕ್ಕೆ ಕೊಜೆಂಟ್ರಿಕ್ಸ್‌ನವರು ಏನು ನೀರು ಬಿಡುತ್ತಾರೆ ಅದರ ಟೆಂಪರೇಚರ್ ಜಾಸ್ತಿಯಾಗುತ್ತದೆ ಎಂದು ಇದೆ. ಇವೆರಡರಿಂದಲೂ ಎನ್‌ವೈರನ್‌ಮೆಂಟಿಗೆ ಏನೂ ತೊಂದರೆಯಾಗದ ಹಾಗೆ ಪ್ರಿವೆನ್‌ಟೀವ್ ಕ್ರಮ ಏನಾದರೂ ತೆಗೆದುಕೊಂಡಿದ್ದಾರೋ ಹೇಗೆ? ಇನ್ನೊಂದು ಮಾನ್ಯ ಮೊಯಿಲಿಯವರ ಸರ್ಕಾರ ಇದ್ದಾಗ 4,380 ಕೋಟಿ ರೂಪಾಯಿ ಪ್ರಾಜೆಕ್ಟ್ ಇತ್ತು. Now it is reduces to Rs.3948 crores as on 2000 AD. ಎಂದು ಇದೆ. ಇಷ್ಟು ಕಡಿಮೆ ಆಗುವುದಕ್ಕೇನಾದರೂ ಪ್ಲಾಂಟ್ ಅಂಡ್ ಮೆಷಿನರಿಯೊಳಗೆ ಕಡಿಮೆ ಮಾಡಿದ್ದಾರೋ? I Would like to know whether the Plant and Machinery requried is reduced or the cost of the plant

and machinery is reduced. ಕಾಸ್ಟ್ ಹೇಗೆ ಕಡಿಮೆಯಾಯಿತು? ಇದನ್ನು ಕ್ಲಾರಿಫೈ ಮಾಡಿದರೆ ಒಳ್ಳೆಯದು.

MR.SPEAKER:- The hon.Member would like to know whether there has been a reduction in the volume of the project that was proposed earlier, accounted for reduction in cost of economics. He just wants a clarification.

ಶ್ರೀ ಜೆ.ಹೆಚ್.ಪಟೇಲ್:- ಕೊಜೆಂಟ್ರಿಕ್ಸ್ ಪ್ರಾಜೆಕ್ಟ್‌ಡ್ ಕಾಸ್ಟ್ ಪಲ್ಯೂಷನ್ ಬೋರ್ಡ್ ಫಸ್ಟ್ ಕ್ಲಿಯರೆನ್ಸ್ ಕೊಟ್ಟಾಗ 1994ರಲ್ಲಿ ಫಾರಿನ್ ಇನ್‌ವೆಸ್ಟ್‌ಮೆಂಟ್ 5,088 ಕೋಟಿ ರೂಪಾಯಿ ಇತ್ತು. ಅನಂತರ ದಿನಾಂಕ 30.9.94ರಲ್ಲಿ ಅವರು ಪಿ.ಪಿ.ಎ.ಗೆ ಸೈನ್ ಮಾಡುವಾಗ ಅದು 4,387 ಕೋಟಿ ರೂಪಾಯಿ ಆಯಿತು. ನಂತರ ನಮ್ಮ ಎಲ್ಲಾ ಎಕ್ಸ್‌ರ್‌ಸೈಜ್ ಆಗಿ ಸಿಇಎ ಹತ್ತಿರ ಪಿ.ಪಿ.ಎ.ಗೆ ಮೊದಲು 1996 ಜನವರಿಯಲ್ಲಿ ನಾವು ಸೈನ್ ಮಾಡಿದಾಗ ಅದು 4,298 ಕೋಟಿ ರೂಪಾಯಿ ಆಯಿತು. ಈಗ ಕೊನೆಗೆ it has come to Rs.3948.35 crores. The project has been cleared bythe Central Electricity Authority and the Techno-economic committee.

ಶ್ರೀ ಡಿ.ಆರ್.ಪಾಟೀಲ್:- ನಾನು ಕೇಳಿದ್ದುದು What are the factors which influenced the reduction in cost?

ಅಧ್ಯಕ್ಷರು:- ಇದು ಶೂನ್ಯವೇಳೆ, ದಯಮಾಡಿ ತಾವು ಸಹಕರಿಸಿ, ತಮ್ಮ ಲೀಡರ್ ರೈಜ್ ಮಾಡಿದ್ದಾರೆ. ನೀವು ಬಹಳ ಸಲ ಕೈ ಎತ್ತಿದ್ದೀರಿ ಎಂದು ಅವಕಾಶ ಕೊಟ್ಟಿದ್ದೇನೆ. ಇನ್ನೊಂದು ಸಲ ಪವರ್ ವಿಷಯ ಡಿಸ್‌ಕಷನ್‌ಗೆ ಬರುತ್ತದೆ, if need be, you can discuss about it. We will take up this matter afresh.

ಶ್ರೀ ಡಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೇ, ಒಂದು ನಿಮಿಷದಲ್ಲಿ ಆನ್ಸರ್ ಮಾಡಬಹುದು. Sir, I would like to know the contributory factors which influenced the reduction in the cost of the project.

ಶ್ರೀ ಜೆ.ಹೆಚ್.ಪಟೇಲ್:- ಕೊಜೆಂಟ್ರಿಕ್ಸ್‌ನವರು ಬೇರೆ ಬೇರೆ ಕೆಲಸಕ್ಕೆ ಬೇರೆ ಬೇರೆ ಟೆಂಡರ್ ಕರೆಯುತ್ತಾರೆ. ಪೈಪ್ಸ್ ಹಾಕುವವರು ಯಾರು? ಟರ್ಬೈನ್ ಫಿಕ್ಸ್ ಮಾಡುವವರು ಯಾರು? ವಾಟರ್ ಟವರ್ ಕಟ್ಟುವವರು ಯಾರು? ಎಂದು ಟೆಂಡರ್ ಕರೆದಾಗ ಸುಮಾರು ಏಳು ಇಂಟರ್ ನ್ಯಾಷನಲ್ ನೋನ್ ಕಂಪನಿಗಳವರು ಬಿಡ್ ಮಾಡಿದ್ದಾರೆ. ಆ ಬಿಡ್ಡಿಂಗ್ ಎಲ್ಲಾ ಅಪ್ರೂವ್ ಮಾಡಿದ ಮೇಲೆ ಕಾಸ್ಟ್ ಫಿಕ್ಸ್ ಮಾಡುವಾಗ ಅವರು ಹಿಂದೆ 1997ಕ್ಕೆ ಪವರ್ ಸಿಗುತ್ತದೆ ಆಗ ಎಷ್ಟು ಕಾಸ್ಟ್ ಎಂದು

ಮಾಡಿದ್ದರು. ಈಗ ನಾವು 2 ಸಾವಿರ ಇಸವಿಗೆ ಈ ಕಾಸ್ಟ್ ಅನ್ನು ಫಿಕ್ಸ್ ಮಾಡುವಾಗ 2000 ಇಸವಿಗೆ ಇಷ್ಟು ಆಗುತ್ತದೆ ಎಂದು ಫಿಕ್ಸ್ ಮಾಡುವುದು. ಆದುದರಿಂದ ವೇರಿಯೇಷನ್ ಏಕೆ ಆಗುತ್ತದೆ, ಈ ಕಾಂಪೋನೆಂಟ್ ಏನಿದೆ ಎಂಜಿನಿಯರಿಂಗ್ ಪ್ರಕ್ಯೂರ್‌ಮೆಂಟ್ ಕಾಸ್ಟ್ ವೇರಿಯೇಷನ್ ಆದಾಗ ಇದು ಆಗುತ್ತದೆ.

SRI H.N.NANJEGOWDA:- I would like the Government to clarify as to how much money actually the company is investing. How much foreign exchange they are bringing? How much money they are generating in the Indian market and what are the concessions they are extending to Indian investors? Whether the investors will get tax free interest of 16% Whether we could have extended the same concession to our Karnataka Power Corporation?

SRI J.H.PATEL:- The foreign component is Rs.597.136 crores. Domestic component is 1436 crores and total it is 3317.308 that means 84% is the total money invested by COGENTRIX.

I repeat, foreign component is 600 crores, ಎಂದು ಇಟ್ಟುಕೊಳ್ಳಿ, domestic component is 1400 crores and total cost is 3317 crores. Total participation of Cogentrix is 84%. ಅವರೇ ರಿಸೋರ್ಸ್ ಮೊಬಲೈಜ್ ಮಾಡುತ್ತಾರಲ್ಲ ಅದು ಸೇರಿದರೆ 84% of the cost will be born by the COGENTRIX out of 3317 crores.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಟೋಟಲ್ ಪ್ರಾಜೆಕ್ಟ್ ಕಾಸ್ಟ್ 3900 ಅಂಡ್ ಆಡ್ ಅದರೊಳಗೆ ಅವರದ್ದು 84 ಪರ್ಸೆಂಟ್ ಅಥವಾ ಆಫ್ 3300.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳಾದ ನಂತರ ಇವೊತ್ತೇ ಬಹಳ ಸ್ಫೂರ್ತಿಯಾಗಿ ಉತ್ತರ ಕೊಟ್ಟಂಥದ್ದು, ಫುಲ್ ಬ್ಯಾಟರಿ ಚಾರ್ಜ್‌ನಲ್ಲಿ ಇವೊತ್ತು ಇವರ ಉತ್ತರ ನೋಡಿದರೆ ಇಷ್ಟು ಕೊಡಬೇಕು ಅವರು. ಅದೆ ಏಕೆ ಡಲ್ ಆಗಿದ್ದೀರಿ ಎಂದು ನಿನ್ನೆ ಅದೇ ಉದ್ದೇಶಕ್ಕಾಗಿ ತಮ್ಮನ್ನು ಕೇಳಿದ್ದುದು. ಬಹಳ ಫುಲ್ ಬ್ಯಾಟರಿ ಚಾರ್ಜ್‌ನಲ್ಲಿ ಉತ್ತರ ಕೊಡುತ್ತಿದ್ದಾರೆ ಬಹಳ ಖುಷಿಯಾಯಿತು. ಆ ಪರಿಸರವಾದಿಗಳ ಬಗ್ಗೆ ಹೇಳುತ್ತಾ ತಾವು ಅವರನ್ನು ಕರೆದು

ಮಾತನಾಡಿದ್ದೇವೆ ಎಂದು ಹೇಳಿದ್ದೀರಿ. ತಮ್ಮ ಮಾತಿನ ಪ್ರಕಾರ ಅವರು ಏನು ಹೇಳಿದ್ದಾರೆ, ಯಾವ ರೀತಿ ಒಪ್ಪಿಕೊಂಡಿದ್ದಾರೆ? ಏಕೆಂದರೆ ಅಲ್ಲೆಲ್ಲ ದೊಡ್ಡ ಚಳುವಳಿ ಮಾಡಬೇಕೆಂದು ತೀವ್ರವಾದಂಥ ಹೋರಾಟ ನಡೆಯುತ್ತಾ ಇದೆ. ಈಗ ತಾವು ಮಾತನಾಡುವಾಗ ಫೈಲ್ವಾನ್ ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದು ಹೇಳಿ ನಮ್ಮದೊಂದು ಗಾದೆ ಇದೆ. ಈ ತರಹ ಹೋದರೆ ನೀವು ಯಾವ ಪಟ್ಟಿಗೂ ಸಿಕ್ಕುವುದಿಲ್ಲ. ಈಗ ನೀವು ಎಲ್ಲರ ಮೇಲೂ ಪಟ್ಟು ಹಾಕಿದಿರಿ, ಬಿ.ಜೆ.ಪಿ.ಯವರಿಗೆ ಪಟ್ಟು ಹಾಕಿದಿರಿ, ಕಾಂಗ್ರೆಸ್‌ನವರಿಗೆ ಪಟ್ಟು ಹಾಕಿದಿರಿ ನನಗೆ ಬಹಳ ಖುಷಿಯಾಯಿತು. ನೀವು ಈ ತರಹ ಆಗುತ್ತಿದ್ದರೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸ್ವಾಮಿ, ನೀವು ಆ ಕಡೆ ಹೋಗಿ ಕುಳಿತುಕೊಳ್ಳಿ. ನಾವೇನು ಇವರನ್ನು ನಮ್ಮ ಕಡೆ ನಮ್ಮ ಕಡೆ ಎಂದು ತಿಳಿದುಕೊಂಡು ನಾವು ಕುಳಿತರೆ ಒಳಗಿಂದೊಳಗೆ ಈ ಸಂಚು, ನೀವು ಏಕೆ ಇವರನ್ನು ಈ ಕಡೆ ಬಿಟ್ಟಿರಿ.

ಅಧ್ಯಕ್ಷರು:- ಅವರು ನಿಮ್ಮ ಕಡೆಯೇ, ಅಪಾರವಾದ ಪ್ರೀತಿ ಅಷ್ಟೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೋಡಿ, ಇಲ್ಲೇ ಕುಳಿತು ನಮಗೇ ಬೈಯುತ್ತಿದ್ದಾರೆ. ಅಧ್ಯಕ್ಷರೆ, ನೀವೇ ರಕ್ಷಣೆಗೆ ಬರಬೇಕು.

ಅಧ್ಯಕ್ಷರು:- ಯಾರೇ ಆ ಕಡೆ ಹೋದರು ನಾನು ನಿಮ್ಮ ಕಡೆ ಇದ್ದೇನಲ್ಲ. ನೀವು ನೆಮ್ಮದಿಯಿಂದ ಇರಿ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಇವರು ಬಹುಮತ ಪಡೆದಿರತಕ್ಕಂಥವರು, ನಾವೆಲ್ಲ ಒಬ್ಬೊಬ್ಬರೆ ಬಂದವರು. ಆದ್ದರಿಂದ ಸ್ವಲ್ಪ ನಿಮ್ಮ ರಕ್ಷಣೆ ಬೇಕಲ್ಲ ನಮಗೆ. ಆದ್ದರಿಂದ ನಾವು ಸುತ್ತಿಬಳಸಿ ನಿಮ್ಮ ಹತ್ತಿರಕ್ಕೆ ಬರುತ್ತಿದ್ದೇವೆ. ಅದಕ್ಕೋಸ್ಕರವಾಗಿ ನಾವು ಆ ಕಡೆ ಹೋಗಬೇಕಾಗಿಲ್ಲ, ನೀವು ಇದ್ದಾಗಲೂ ನಾವು ಆ ಕಡೆ ಹೋಗಿಲ್ಲ. ಅವರು ಇದ್ದಾಗಲೂ ಹೋಗಿಲ್ಲ. ನಮಗೆ ಈ ಸ್ಥಳವೆ ಸಾಕು. ಇಲ್ಲೇ ಇರೋಣ. ಅದಕ್ಕೋಸ್ಕರ ಪರಿಸರವಾದಿಗಳ ಬಗ್ಗೆ ತಾವು ಎಲ್ಲರನ್ನು, ಹೆಬ್ಬಿಕರ್‌ರವರನ್ನು ಕರೆದು ಮಾತನಾಡಿದ್ದೇವೆ ಎಂದು ಹೇಳಿದಿರಿ. ಅದು ಏನು ಪರಿಸ್ಥಿತಿ? ಇವರದ್ದು ತಮ್ಮ ಜೊತೆಯಲ್ಲಿ ಒಪ್ಪಿಗೆ ಆಯಿತೆ? ಒಪ್ಪಿಗೆ ಮಾಡಿದಿರಾ ಏನು? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿಜವಾಗಲೂ ಜನ ಕೂಗುತ್ತಿದ್ದಾರೆ, ಮಠಾಧಿಪತಿಗಳು ಕೂಗುತ್ತಿದ್ದಾರೆ, ಧಾರ್ಮಿಕವಾದಿಗಳು ಕೂಗುತ್ತಿದ್ದಾರೆ. ಇದರ ಬಗ್ಗೆ ತಾವು ಪ್ರಾಮಾಣಿಕವಾಗಿ ಏನು ಚಿಂತನೆ ಮಾಡಿದ್ದೀರಿ ಎಂದು ತಾವು ಹೇಳಿದರೆ ಸಾಕು ಎಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

+ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು):- ಸನ್ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಅನುಮತಿಯನ್ನು ಕೋರಿ ನಾನು ದೈತ ಫಿಲಾಸಫಿ ಎಲ್ಲಿಂದ ಪ್ರಪೋಗೇಟ್ ಆಗುತ್ತದೆ ಅಂತಹ ಜಿಲ್ಲೆಯಿಂದ ನಾನು ಬಂದಿದ್ದೇನೆ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಏಕೆಂದರೆ ತಾವು ದೈತ ಅದ್ವೈತ ಎಂದು ಹೇಳಿದಿರಿ. ಅದಕ್ಕೋಸ್ಕರ

ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಸನ್ಮಾನ್ಯ ಹಿಂದಿನ ಮುಖ್ಯಮಂತ್ರಿಗಳು ಹಾಗೂ ಈಗಿನ ಪ್ರಧಾನಮಂತ್ರಿಗಳು ಕೇಂದ್ರದಲ್ಲಿದ್ದಾಗ ಬಹುಶಃ ಅವರಿಗೆ ಅನೇಕ ಸ್ಪಷ್ಟ ಮಾಹಿತಿಗಳು ಗೊತ್ತಾಗಿರಬಹುದು. ಇಲ್ಲಿ ಗೊತ್ತಾಗದಂತಹ ಅನೇಕ ಅಂಶಗಳು ಅವರಿಗೆ ಗೊತ್ತಾಗಿ ಅದಕ್ಕೋಸ್ಕರವಾಗಿ ಇದಕ್ಕೆ ಒಪ್ಪಿಗೆ ಕೊಡದೇ ಇರುವಂಥದ್ದಕ್ಕೆ ಕಾರಣ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ವಿಷಯ ಎಂದು ಹೇಳಿದರೆ, 1992ರಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಚರ್ಚೆಗೆ ಬಂದಾಗ ಕೊಜೆಂಟ್ರಿಕ್ಸ್ ಯಾವುದು ಇದೆ ಹತ್ತು ಸ್ಥಾವರಗಳ ಮೂಲಕ ವಿಶ್ವಾದ್ಯಂತ ಒಟ್ಟು ಉತ್ಪಾದನೆ ಮಾಡಿದ ವಿದ್ಯುತ್ ಎಂದು ಹೇಳಿದರೆ ಕೇವಲ 900 ಮೆಗಾವಾಟ್ ಮಾತ್ರ. ಆದರೆ ಬೆಲ್ ಕಂಪನಿ ಯಾವುದು ಇದೆ ವಿದೇಶದಲ್ಲಿರುವಂಥ 25 ಯೋಜನೆಗಳಿಗೂ ಸೇರಿದಂತೆ 60 ಸಾವಿರ ಮೆಗಾವಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಿದೆ. ಈ ಹಿನ್ನೆಲೆಯಲ್ಲಿ ಬೆಲ್‌ನಂತಹ ಸ್ಥಳೀಯ ಸಂಸ್ಥೆಗಳಿಗೆ ಕೊಡದೆ ಕೊಜೆಂಟ್ರಿಕ್ಸ್‌ಗೆ ಕೊಟ್ಟದ್ದು ತಪ್ಪು ಎಂದು ಹೇಳಿ ಅವರ ಗಮನಕ್ಕೆ ಬಂದಿರಬೇಕು. ಆ ಕಾರಣಕ್ಕೋಸ್ಕರ ಒಪ್ಪಿಗೆಯನ್ನು ಕೊಟ್ಟಿರಲಿಕ್ಕಿಲ್ಲ ಎಂಬುದು ಒಂದನೆಯ ವಾದ. ಎರಡನೆಯದಾಗಿ ಆಗಿರುವಂತಹ ಒಪ್ಪಂದದಲ್ಲಿ ಈ ತರಹ ಒಂದು ಒಪ್ಪಂದ ಆಗಿದೆ. ಒಪ್ಪಂದವನ್ನು ಪಾಲಿಸುವಾಗ ರಾಜ್ಯ ಅಥವಾ ಕೇಂದ್ರದಲ್ಲಾಗುವ ಕಾನೂನಿನ ಬದಲಾವಣೆಗಳಿಂದಾಗಲೀ ರಾಜಕೀಯ ಅಥವಾ ಕೈಗಾರಿಕಾ ಅಶಾಂತಿಯಿಂದಾಗಲೀ ಆಗಬಹುದಾದ ನಷ್ಟಗಳಿಂದ ರಕ್ಷಿಸಲು ಆಗದ ಷರತ್ತುಗಳಂತೆ ಸರಕಾರವೇ ಈ ನಷ್ಟವನ್ನು ಭರಿಸಬೇಕಾಗಿದೆ. ವಿದ್ಯುತ್ತನ್ನು ಕೊಳ್ಳುವ ಒಪ್ಪಂದವನ್ನು ಭಾರತದ ನ್ಯಾಯಾಲಯಗಳಲ್ಲಿ ಪ್ರಶ್ನಿಸಲಾಗದು ಎಂಬುದು ಒಂದು ಅಪಾಯಕಾರಿ ಅಂಶ. ಈ ಅಂಶ ಕೂಡ ಅದರಲ್ಲಿ ಅಳವಡಿಕೆ ಆಗಿದೆ ಎನ್ನುವ ಕಾರಣಕ್ಕೋಸ್ಕರ ಸನ್ಮಾನ್ಯ ಪ್ರಧಾನಮಂತ್ರಿಗಳು ಒಪ್ಪಿಗೆ ಕೊಟ್ಟಿರಲಿಕ್ಕಿಲ್ಲವೆಂದು ನನ್ನ ಅನಿಸಿಕೆ. ಮೂರನೆಯದು ಎಂದು ಹೇಳಿದರೆ, ಈ ಯೋಜನೆಯ ಒಟ್ಟು ಮೊತ್ತ 4387 ಕೋಟಿ. ಈಕ್ವಿಟಿಯ ಮೊತ್ತ 1129.96 ಕೋಟಿ. ಬಾಕಿ ರಾಷ್ಟ್ರಗಳಿಂದ ಮತ್ತು ಹೊರಗಿನ ಸಾಲಗಳ ಮೂಲಕ ಬರುವಂತದ್ದು 3157 ಕೋಟಿ. ಇದರಲ್ಲಿ ಉಲ್ಲೇಖ ಆಗುವಂತಹ ಒಂದು ಅಂಶವೆಂದರೆ, ಕೊಜೆಂಟ್ರಿಕ್ಸ್‌ನ ಕೊಡುಗೆ ಕೇವಲ 283 ಕೋಟಿ ಮಾತ್ರ. ಅಂದರೆ ಕೊಜೆಂಟ್ರಿಕ್ಸ್ ಕೊಡುಗೆ ಆಂಶಿಕ ಕೇವಲ 7 ಪರ್ಸೆಂಟ್ ಮಾತ್ರ. ಅಂದರೆ 7 ಪರ್ಸೆಂಟ್ ಅನ್ನು ಮಾತ್ರ ತೊಡಗಿಸಿ ಸಾವಿರಾರು ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನ್ನು ಹಾಕುವಂಥ ಯೋಜನೆ ಹಾಕಿಕೊಂಡಿದ್ದಾರೆ. ಹೀಗಿರುವಾಗ ಈ 7 ಪರ್ಸೆಂಟ್ ನಮ್ಮ ಕಡೆಯಿಂದ, ಬೆಲ್ ಸಂಸ್ಥೆಯಿಂದ ಮಾಡಿಸಿ, ಏಕೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ಇನ್ನೊಂದು ಅಂಶ ತಾವು ಸ್ಪಷ್ಟೀಕರಣವನ್ನು ಕೊಡಿಸಿ....

ಅಧ್ಯಕ್ಷರು:- ಹೇಗೆ ಕೊಡುತ್ತಾರೆ, ಹೇಗೆ ಸಾಧ್ಯ? ಎಷ್ಟು ಸಲ ನಿಮಗೆ ನಾನು ಅಪೀಲ್ ಮಾಡಿಕೊಳ್ಳಬೇಕು, ಶೂನ್ಯವೇಳೆಯಲ್ಲಿ ಒಂದು ವಿಚಾರಕ್ಕೆ ಸಂಬಂಧಿಸಿದಂತೆ ಅವರು ಮೆನ್‌ಷನ್ ಮಾಡಿದರು. ನಾನೇನೊ ಸೌಜನ್ಯ ತೋರಿಸುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ. ನೀವು ಎನ್‌ಟೀರ್ ರೆಗ್ಯುಲರ್ ಡಿಬೇಟ್‌ಗೆ ಕನ್‌ವರ್ಟ್ ಮಾಡುತ್ತೀರಿ,

ಹೇಗೆ ಆಗುತ್ತದೆ? ಅದಕ್ಕೆ ನಾನು ಹೇಳಿದ್ದುದು ಪವರ್ ಮೇಲೆ ಡಿಸ್ಕಷನ್‌ನಲ್ಲಿ ಪಾರ್ಟಿಸಿಪೇಟ್ ಮಾಡಿ. ಅಥವಾ ಬೇರೆ ಯಾವುದಾದರೂ ರೂಪದಲ್ಲಿ ಕೊಡಿ. ತಾವು ದಯಮಾಡಿ, ನಿಮ್ಮ ಶ್ರದ್ಧೆಯನ್ನು ನಾನು ಒಪ್ಪುತ್ತೇನೆ. ಶೂನ್ಯವೇಳೆಯಲ್ಲಿ ಇದಕ್ಕೆಲ್ಲ ಅವಕಾಶ ಇರುವುದಿಲ್ಲ, ದಯಮಾಡಿ ಎಲ್ಲರೂ ನಿಯಮಾವಳಿಯನ್ನು ಅಭ್ಯಾಸ ಮಾಡಿ ಬನ್ನಿ.

ಶ್ರೀ ಎನ್.ಯೋಗೀಶ್ ಭಟ್:- ನಾನು ಒಂದು ಒಂದು ಅಂಶದಲ್ಲಿ ಮುಕ್ತಾಯಗೊಳಿಸುತ್ತೇನೆ, 33 ಲಕ್ಷ ಟನ್ ಇದ್ದಿಲು ವರ್ಷಕ್ಕೆ....

ಅಧ್ಯಕ್ಷರು:- ಇದೆಲ್ಲಾ ಒಂದೆ, ಎನ್ರಾನ್, ಕೊಜೆಂಟ್ರಿಕ್ ಎಲ್ಲಾ ಒಂದೆ, ಅದರಲ್ಲೇ ನಿಮಗೆ ಉತ್ತರ ಸಿಕ್ಕಿಬಿಡುತ್ತದೆ.

ಶ್ರೀ ಎನ್.ಯೋಗೀಶ್ ಭಟ್:- ಇಲ್ಲಿ ಕೆಲವು ಅಂಶಗಳಿಗೆ ಸ್ಪಷ್ಟೀಕರಣವನ್ನು ಕೊಟ್ಟಿಲ್ಲ ಅಧ್ಯಕ್ಷರೆ, 1700 ಟನ್ ಬೂದಿಗಳು ಯಾವುದು ಬರುತ್ತದೆ, ಅದಕ್ಕೆ ಏನು ವಿತರಣಾ ವ್ಯವಸ್ಥೆ ಮಾಡಿದ್ದಾರೆ. ಇವೊತ್ತು ಜಿಲ್ಲೆಯ ಜನತೆಯ ಆಕ್ರೋಶ ಏನೆಂದರೆ 1700 ಕೋಟಿ ಟನ್ ಬೂದಿ ಯಾವುದು ಇದೆ ಅದನ್ನು ವಿತರಣೆ ಮಾಡಲಿಕ್ಕೆ ಏನು ಮಾಡುತ್ತೀರಿ? ಮತ್ತು ಡಿ ಸಲ್ಫರೈಜೇಷನ್‌ಗೆ ಸ್ಕ್ರಬ್ಬರ್ ಸಿಸ್ಟಂ ಅನ್ನು ಅಳವಡಿಸಿಲ್ಲ. ಕೊನೆಯದಾಗಿ ಅಲ್ಲಿಂದ ವಿತರಣಾ ವ್ಯವಸ್ಥೆಯಲ್ಲಿ 23 ಪರ್ಸೆಂಟ್‌ಗಿಂತ ಜಾಸ್ತಿ ನಷ್ಟ ಆಗುವುದರಿಂದ ದಯವಿಟ್ಟು ಅದನ್ನು ಬೆಂಗಳೂರಿನ ಸುತ್ತಮುತ್ತಲೆ ಮಾಡುವಂಥದ್ದು ಹೆಚ್ಚು ಉಚಿತ ಎಂಬ ಅಂಶವನ್ನೂ ಕೂಡ ಹೇಳುತ್ತಾ, ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳುತ್ತಾರೆ, ಸ್ಟೀಂ ಔಟ್ ಬಾರದಂತಹ ಯೂನಿಟ್‌ಗಳಿಂದ ಅನೇಕ ವಿದ್ಯುತ್ ಯೋಜನೆಗಳನ್ನು ಸುಮಾರು ಹೆಚ್ಚುಕಡಿಮೆ ಒಂದು ಸಾವಿರ ಮೆಗಾವ್ಯಾಟ್ ಉತ್ಪಾದನೆ ಮಾಡುವಂತದ್ದನ್ನ, ನಾಫ್ತಾವನ್ನು ಉರಿಸಿ ವಿದ್ಯುತ್ ಉತ್ಪಾದನೆ ಮಾಡುವಂತಹ ಯೋಜನೆಯನ್ನು ಹಾಕಿರುವುದರಿಂದ ದಯವಿಟ್ಟು ಕೊಜೆಂಟ್ರಿಕ್ಸನ್ನ ದಕ್ಷಿಣ ಕನ್ನಡ ಜಿಲ್ಲೆಯ ಹತ್ತಿರ ಬೇಡ, ಬೆಂಗಳೂರು ಸುತ್ತಮುತ್ತಲ ಪ್ರದೇಶಕ್ಕೆ ಅದನ್ನು ಸ್ಥಳಾಂತರಿಸಿ ಎಂಬ ಒತ್ತಾಯವನ್ನು ಜಿಲ್ಲೆಯ ಜನತೆಯ ಪರವಾಗಿ ತುಂಬಾ ಕಳಕಳಿಯ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಸಿ.ಭೈರೇಗೌಡ:- ತಾವೇ ಹೇಳಿದ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ದಿವಸ ತಾವು ಇನ್ನು ಮುಂದೆ ಶೂನ್ಯ ವೇಳೆಗೆ ಅವಕಾಶವನ್ನು ಕೊಡುವುದಿಲ್ಲ ಎನ್ನುವ ಮೊತನ್ನು ತಾವು ಹೇಳಿದರಿ. ಇವೊತ್ತು ಸಾಕಷ್ಟು ಈ ಶೂನ್ಯವೇಳೆಯಲ್ಲಿ ಕಳೆದಿದ್ದೇವೆ. ದಯವಿಟ್ಟು ಮುಂದಿನ ಅಧಿಕೃತ ಕಲಾಪಕ್ಕೆ ತಾವು ಅವಕಾಶ ಮಾಡಿಕೊಡುವುದಕ್ಕೆ ತಾವು ಹೇಳಿದ ಮಾತನ್ನು ನಡೆಸಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

MR.SPEAKER:- I am aware of that.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನನ್ನದು ಒಂದೇ ಪ್ರಶ್ನೆ. ಪವರ್ ಪರ್ಚೇಸ್ ಅಗ್ರಿಮೆಂಟ್‌ನಲ್ಲಿ 2.37 ಪೈಸೆ ಎಂದು ಇದೆ. ಅದು ಪ್ರೊಡಕ್ಷನ್ ಕಾಸ್ಟ್ ಅಥವಾ ಫೈನಲಿ ಅದನ್ನು ಸಪ್ಲೈ ಮಾಡುವಾಗ, ಗ್ರಾಹಕರಿಗೆ ಬರುವಾಗ ರೇಟ್ ಎಷ್ಟಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ.

+ ಶ್ರೀ ಜೆ.ಎಚ್.ಪಟೇಲ್:- ಎರಡು ಸಾವಿರದ ಇಸವಿಯಲ್ಲಿ ಆ ಕಂಪನಿಯಿಂದ ನಾವು ಪವರ್ ಕೊಂಡುಕೊಳ್ಳುವಾಗ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಅಷ್ಟು ದುಡ್ಡು ಕೊಡುತ್ತದೆ. ನಾವು ಮತ್ತೆ ಇದನ್ನು ಶಿಫ್ಟ್ ಮಾಡುವುದಕ್ಕಂತೂ ಸಾಧ್ಯವಿಲ್ಲ. ತಾವು ದಯಮಾಡಿ ಸಹಾಯ ಮಾಡಬೇಕು. ಅಲ್ಲಿನ ಶಾಸಕರು ಜನರಿಗೆ ಇದು ಅನಿವಾರ್ಯ, ಈ ಅನಿವಾರ್ಯತೆಯನ್ನು ನೀಗಿಸುವುದಕ್ಕೆ ಇಂತಹ ಪ್ರಾಜೆಕ್ಟ್ ಮಾಡಲೇಬೇಕು ಎಂದು ಹೇಳಬೇಕು. ಇನ್ನು ಪರಿಸರ ವಾದಿಗಳನ್ನು ನಾವು ಕರೆದು ಮಾತನಾಡುತ್ತೇವೆ. ನಾನು ಬೇಕಾದರೆ ಅವರಿಗೆ ಕನ್ವಿನ್ಸ್ ಮಾಡುತ್ತೇನೆ. ನಾನು ಎರಡು-ಮೂರು ಸಭೆಗಳಲ್ಲಿ ಹೇಳಿದ್ದೇನೆ. ಗೇರುಸೊಪ್ಪ ಪ್ರಾಜೆಕ್ಟ್‌ಗೆ ಹೋದಾಗ ಅಲ್ಲಿ ಕೆಲವರು ಬಂದಿದ್ದರು. ಅದಕ್ಕೆ ಆಲ್ಟರ್‌ನೇಟಿವ್ ಏನಿದೆ ಅದನ್ನು ನನಗೆ ತೋರಿಸಿ. ಅವರು ಸೂರ್ಯಶಕ್ತಿ ಎಂದು ಹೇಳಿದರು. ಸೂರ್ಯ ಶಕ್ತಿಯನ್ನು ಸೊಲಾರ್ ಸಿಸ್ಟಂ ಎಂದು ಏನು ಕರೆಯುತ್ತೇವೆ, ಅದು ನೀರನ್ನು ಕಾಯಿಸುವುದಕ್ಕೆ ಮಾತ್ರ ಸಾಧ್ಯವಾಗುತ್ತದೆ. ನಾವು ಇಲ್ಲಿಯವರೆಗೆ ಫ್ಲೋರ್ ಮಿಲ್‌ಗಳನ್ನು ರನ್ ಮಾಡಿಲ್ಲ, ಅದು ಬೆಳಕಿಗೆ ಆಗಬಹುದು. ನಮ್ಮ ಸರ್ಕಾರ ಬಂದಮೇಲೆ ಗಾಳಿಯಿಂದ ವಿದ್ಯುತ್ 2 ಮೆ.ವ್ಯಾ. ಜನರೇಟ್ ಮಾಡುತ್ತಿದ್ದಾರೆ. Initial investment will be ten times more. 1 ಮೆ.ವ್ಯಾ.ಗೆ 4 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಬೇಕು ಎಂದರೆ ಅದಕ್ಕೆ 10ರಷ್ಟು ಬೇಕಾಗುತ್ತದೆ. ಇದರ ಸಾಧಕಭಾದಕಗಳನ್ನು ನೋಡಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್‌ರವರೆ ಕಾಳಿಂಗರಾವ್ ಇದ್ದರಲ್ಲಾ ಅವರು ಸಾಮಾನ್ಯವಾಗಿ ಕೂಡಲಸಂಗಮ ದೇವಾ ಎಂದು ಚೆನ್ನಾಗಿ ಹೇಳುವರು ಸ್ವಲ್ಪ ಆರೋಗ್ಯ ಕೆಟ್ಟರೆ ಡಲ್ ಸಂಗಮದೇವ ಎಂದು ಕೊನೆಗೆ ಹೇಳಿಬಿಡುತ್ತಿದ್ದರು.

(ಗೊಂದಲ)

MR.SPEAKER:- I have not permitted to raise that matter. ನಾನು ತಮಗೆ ಅನುಮತಿಯನ್ನು ಕೊಟ್ಟಿಲ್ಲ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ:- ನೀವು ಅವಕಾಶವನ್ನು ಕೊಟ್ಟಿಲ್ಲ. ನಾವು ಅರ್ಥಮಾಡಿಕೊಂಡು ಪ್ರಸ್ತಾಪ ಮಾಡುತ್ತಿದ್ದೇವೆ. ದಯಮಾಡಿ ಇನ್ನೊಂದು ಸಂದರ್ಭದಲ್ಲಿ ಈ ಕೊಜೆಂಟ್ರಿಕ್ಸ್ ವಿಷಯವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಪರಿಶೀಲನೆ ಮಾಡೋಣ.